# KARNATAKA LOKAYUKTA

No.UPLOK-2/DE/245/2016/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 23.02.2021.

## RECOMMENDATION

Sub:- Departmental inquiry against (1) Sri Doddasiddaiah, the then Executive Engineer, (now retired) PWD, Kodagu Division, (2) Sri Ramakrishna, the then Assistant Executive Engineer, (now retired) PWD Sub-division, Somavarpet, (3) Sri T.H.Lingaraju, Assistant Executive Engineer, (now Retired) PWD, Somavarpet Sub-division, and (4) Sri B.G.Bhaskar, the then Assistant Engineer, PWD Sub-Division Somavarpete, Madikeri - reg.

Ref:- 1) Government Order No.PWD 151 SEV 2016 Dated 31.05.2016 and modified order dt.29.06.2016.

2) Nomination order No. UPLOK-2/DE/245/2016 dated 16/18.07.2016 of Upalokayukta, State of Karnataka.

3) Inquiry report dated 22.02.2021 of Additional Registrar of Enquiries-14, Karnataka Lokayukta, Bengaluru.

~~~~~

The Government by its order dated 31.05.2016 and modified order dt.29.06.2016 initiated the disciplinary proceedings against (1) Sri Doddasiddaiah, the then Executive Engineer, (now retired) PWD, Kodagu Division, (2) Sri
~~~~~

Ramakrishna, (now Retired) the then Assistant Executive Engineer, PWD Sub-division, Somavarpet, (3) Sri T.H.Lingaraju, (now Retired) Assistant Executive Engineer, PWD, Somavarpet Sub-division, and (4) Sri B.G.Bhaskar, the then Assistant Engineer, PWD Sub-Division Somavarpete, Madikeri, [hereinafter referred to as Delinquent Government Officials, for short as 'DGOs 1 to 4' respectively] and entrusted the departmental inquiry to this Institution.

2. This Institution by Nomination Order No. UPLOK-2/DE/245/2016 dated 16/18.07.2016 nominated Additional Registrar of Enquiries-1, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them. Subsequently, by order No.Uplok-2/DE/2017 dated 04.07.2017, the matter was transferred to Additional Registrar of Enquiries-7 and finally by Order No.Uplok-1&2/DE/Transfers/2018 dated 06.08.2018, the Additional Registrar of Enquiries-14, Karnataka Lokayukta, Bengaluru,

was re-nominated as the Inquiry Officer to continue the said departmental inquiry against DGOs 1 to 4.

3. The DGO 1 Sri Doddasiddaiah, the then Executive Engineer, (now retired) PWD, Kodagu Division, DGO 2 Sri Ramakrishna, (now Retired) the then Assistant Executive Engineer, PWD Sub-division, Somavarpet, DGO 3 Sri T.H.Lingaraju, (now Retired) Assistant Executive Engineer, PWD, Somavarpet Sub-division, and DGO 4 Sri B.G.Bhaskar, the then Assistant Engineer, PWD Sub-Division Somavarpete, Madikeri, were tried for the following charges :-

> " While you DGO No.1 Sri. Doddasiddaiah, working as Executive Engineer, PWD, Kodagu Division, you DGO No.2 Sri. Ramakrishna, working as Assistant Executive Engineer, PWD, Sub-Division, Somavarpet, you DGO No.3 Sri. T.H. Lingaraju, working as Assistant Executive Engineer, PWD, Somavarpet Sub-Division and you DGO No.4 Sri. B.G. Bhaskar, working as Assistant Engineer, PWD Sub-Division, Somavarpet executed road work from 9.00 kms to 12.00 kms. of Mavinakatte, Thalthar Shettalli - Thakeri - Haraga - Kikkaralli and on investigation it is found that
>
> (i) The surface of the tor road was uneven and there were potholes and patch work was visible.
> (ii) The proportionate use of WMM, SDBC and Bitumen was not according to the sanctioned estimate and it was not tallying with specific entries made in the MB Book and there were deficiency in the use of specific materials to the tune of Rs.7,45,539/- and
> (iii) You DGO No.1 is responsible for misappropriation of funds of Rs.1,86,384/-, you DGO No.2 is responsible for

misappropriation of funds of Rs.1,39,879/-, you DGO No.3 is responsible for misappropriation of funds of Rs.1,39,789/- and you DGO No.4 is responsible for misappropriation of funds of Rs. 2,79,577/- and therefore, you DGOs 1 to 4 have failed to perform your official duty properly and did not maintain absolute integrity and devotion to duties and committed an act which is unbecoming of a Government Servants and therefore you DGOs 1 to 4 are guilty of misconduct under Rule 3(1)(i) to (iii) of KCS (Conduct) Rules 1966. Hence, this charge."

4. The Inquiry Officer (Additional Registrar of Enquiries-14) on proper appreciation of oral and documentary evidence has held that, the above charge against the DGO 1 Sri Doddasiddaiah, DGO 3 Sri T.H.Lingaraju, and DGO 4 Sri B.G.Bhaskar, is 'proved'.

5. Further, the Inquiry Officer (Additional Registrar of Enquiries-14) on proper appreciation of oral and documentary evidence has held that the charge against DGO 2 Sri Ramakrishna, (now Retired) the then Assistant Executive Engineer, PWD Sub-division, Somavarpet, is 'not proved'.

6. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is

hereby recommended to the Government to accept the report of Inquiry Officer and exonerate DGO.2 Sri Ramakrishna, the then Assistant Executive Engineer, (now retired), PWD, Sub-division, Somavarpet, of the charges framed against him.

7. As per the First Oral Statements of the DGOs recorded by the Enquiry Officer,

i) DGO 1 Sri Doddasiddaiah, has retired from service on 31-07-2017;

ii) DGO 3 Sri T.H.Lingaraju, has retired from service on 31-03-2015; and

iv) DGO 4 Sri B.G.Bhaskar, is due for retirement on 30.08.2022.

8. Having regard to the nature of charge *'proved'* against the DGOs 1, 3 and 4, and considering the totality of circumstances, it is hereby recommended to the Government:

i) to impose penalty of 'withholding 10% of pension payable to DGO-1 Sri Doddasiddaiah for a period of five years and also to recover a sum of Rs.1,86,384/- from the pension payable to DGO.1 Sri Doddasiddaiah.'

ii) to impose penalty of 'withholding 10% of pension payable to DGO-3 Sri T.H.Lingaraju for a period of five years and also to recover a sum of Rs.2,79,578/- from the pension payable to DGO.3 Sri T.H.Lingaraju.'

iii) to impose penalty of 'reducing pay of DGO.4 Sri B.G.Bhaskar by two lower stages till the date of his retirement which will have the effect of postponing his future increment/s payable and during the above period he will not earn any increments' and also ' to recover a sum of Rs.2,79,577/- from the pension payable to DGO.4 Sri B.G.Bhaskar.'

9. Action taken in the matter shall be intimated to this Authority.

Connected records are enclosed herewith.

25/2

**(JUSTICE B.S.PATIL)**
**Upalokayukta,**
**State of Karnataka.**

*BS**

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-245/2016/ಎ.ಆರ್.ಇ-14

ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 22/02/2021.

## ವಿಚಾರಣಾ ವರದಿ

**ಉಪಸ್ಥಿತರು: ಕೆ.ಭಾಗ್ಯ,** ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ – (1) **ಶ್ರೀ. ದೊಡ್ಡಸಿದ್ದಯ್ಯ,** ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕೊಡಗು ವಿಭಾಗ, ಮಡಿಕೇರಿ ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಇ ವಿಭಾಗ, ಚಾಮರಾಜನಗರ (2) **ಶ್ರೀ. ರಾಮಕೃಷ್ಣ,** ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಸೋಮವಾರಪೇಟೆ ಉಪ ವಿಭಾಗ, ಮಡಿಕೇರಿ (ನಿವೃತ್ತ) (3) **ಶ್ರೀ. ಟಿ.ಹೆಚ್ ಲಿಂಗರಾಜು,** ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಸೋಮವಾರಪೇಟೆ ಉಪ ವಿಭಾಗ, ಮಡಿಕೇರಿ (ನಿವೃತ್ತ) ಮತ್ತು (4) **ಶ್ರೀ. ಬಿ.ಜಿ ಭಾಸ್ಕರ್,** ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಸೋಮವಾರಪೇಟೆ ಉಪ ವಿಭಾಗ, ಮಡಿಕೇರಿ ಪ್ರಸ್ತುತ ಸಹಾಯಕ ಇಂಜಿನಿಯರ್, ಪಿ.ಆರ್.ಇ ಉಪ ವಿಭಾಗ, ಸೋಮವಾರಪೇಟೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/1047/2014/ಎಆರ್ಇ-7 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 23/05/2016.
2. ಸರ್ಕಾರದ ಪರಿಷ್ಕೃತ ಆದೇಶ ಸಂಖ್ಯೆ: ಲೋಇ 151 ಸೇಇವಿ 2016, ಬೆಂಗಳೂರು, ದಿನಾಂಕ: 29/06/2016.

3. ನಾಮನಿರ್ದೇಶನ ಸಂಖ್ಯೆ:ಉಪಲೋಕ್-2/ಡಿಇ/245/2016, ಬೆಂಗಳೂರು ದಿನಾಂಕ: 18/07/2016.
4. Order No.UPLOK-2/DE/2017 Bangalore, Dtd: 04/07/2017 file transferred from ARE-1 to ARE-7.
5. Order No.UPLOK-1&2/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಈ ದೂರನ್ನು, ದೂರುದಾರರಾದ **ಶ್ರೀ. ಪ್ರಕಾಶ್ ಹೆಚ್.ಎಂ** ತಂದೆ ಹೆಚ್.ಎಸ್ ಮಂದಣ್ಣ, ಹರಗ ಗ್ರಾಮ, ಶಾಂತಳ್ಳಿ ಅಂಚೆ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರರು (1) **ಶ್ರೀ. ದೊಡ್ಡಸಿದ್ದಯ್ಯ,** ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕೊಡಗು ವಿಭಾಗ, ಮಡಿಕೇರಿ ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಇ ವಿಭಾಗ, ಚಾಮರಾಜನಗರ (2) **ಶ್ರೀ. ರಾಮಕೃಷ್ಣ,** ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಸೋಮವಾರಪೇಟೆ ಉಪ ವಿಭಾಗ, ಮಡಿಕೇರಿ (ನಿವೃತ್ತ) (3) **ಶ್ರೀ. ಟಿ.ಹೆಚ್ ಲಿಂಗರಾಜು,** ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಸೋಮವಾರಪೇಟೆ ಉಪ ವಿಭಾಗ, ಮಡಿಕೇರಿ (ನಿವೃತ್ತ) ಮತ್ತು (4) **ಶ್ರೀ. ಬಿ.ಜಿ ಭಾಸ್ಕರ್,** ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಸೋಮವಾರಪೇಟೆ ಉಪ ವಿಭಾಗ, ಮಡಿಕೇರಿ ಪ್ರಸ್ತುತ ಸಹಾಯಕ ಇಂಜಿನಿಯರ್, ಪಿ.ಆರ್.ಇ ಉಪ ವಿಭಾಗ, ಸೋಮವಾರಪೇಟೆ ರವರ ವಿರುದ್ಧ ಸಲ್ಲಿಸಿ, ಲೋಕೋಪಯೋಗಿ ಇಲಾಖೆ ವತಿಯಿಂದ 2012-13ನೇ ಸಾಲಿನಲ್ಲಿ ಕೈಗೊಂಡಿರುವ "ಮಾವಿನಕಟ್ಟೆ ತಲ್ತಾರ್ ಶೆಟ್ಟಳ್ಳಿ – ತಾಕೇರಿ – ಹರತ – ಕಿಕ್ಕರಳ್ಳಿ ರಸ್ತೆಯ ಕಿ.ಮೀ. 9.00 ರಿಂದ 12.00 ರವರೆಗಿನ ರಸ್ತೆ" ಕಾಮಗಾರಿಯು ಕಳಪೆ

ಕಾಮಗಾರಿಯಾಗಿದೆ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕಂದು ಕೋರಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 29/06/2016 ರ ಪರಿಷ್ಕೃತ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 18/07/2016 ರಂದು ಅಪರ ನಿಬಂಧಕರು, ವಿಚಾರಣೆಗಳು-1 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು ವಿಚಾರಣೆಗಳು-7 ರವರಿಗೆ ವರ್ಗಾವಣೆಗೊಂಡಿದ್ದು ಮತ್ತೊಮ್ಮೆ ಉಲ್ಲೇಖ (5)ರಂತೆ ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.ರವರ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು-1 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ: 26/07/2016 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

# ಅನುಬಂಧ-1

## ದೋಷಾರೋಪಣೆ

While you DGO No.1 Sri. Doddasiddaiah, working as Executive Engineer, PWD, Kodagu Division, you DGO No.2 Sri. Ramakrishna, working as Assistant Executive Engineer, PWD, Sub-Division, Somavarpet, you DGO No.3 Sri. T.H. Lingaraju, working as Assistant Executive Engineer, PWD, Somavarpet Sub-Division and you DGO No.4 Sri. B.G. Bhaskar, working as Assistant Engineer, PWD Sub-Division, Somavarpet executed road work from 9.00 kms to 12.00 kms. of Mavinakatte, Thalthar Shettalli – Thakeri – Haraga – Kikkaralli and on investigation it is found that

(i) The surface of the tor road was uneven and there were potholes and patch work was visible.

(ii) The proportionate use of WMM, SDBC and Bitumin was not according to the sanctioned estimate and it was not tallying with specific entries made in the MB Book and there were deficiency in the use of specific materials to the tune of Rs.7,45,539/- and

(iii) You DGO No.1 is responsible for misappropriation of funds of Rs.1,86,384/-, you DGO No.2 is responsible for misappropriation of funds of Rs.1,39,879/-, you DGO No.3 is responsible for misappropriation of funds of Rs.1,39,789/- and you DGO No.4 is responsible for misappropriation of funds of Rs. 2,79,577/-

and therefore, you DGOs 1 to 4 have failed to perform your official duty properly and did not maintain absolute integrity

and devotion to duties and committed an act which is unbecoming of a Government Servants and therefore you DGOs 1 to 4 are guilty of misconduct under Rule 3(1)(i) to (iii) of KCS (Conduct) Rules 1966. Hence, this charge.

## ಅನುಬಂಧ–2

## ದೋಷಾರೋಪಣೆಯ ವಿವರ

**(ಕಲಂ 12(3) ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಅಡಿಯಲ್ಲಿ ಸಲ್ಲಿಸಿದ ವರದಿಯ ಯಥಾವತ್ತು ವಿವರಣೆಯಾಗಿರುತ್ತದೆ)**

2. **ದೂರಿನ ಸಂಕ್ಷಿಪ್ತ ಸಾರಾಂಶ:–** ದೂರುದಾರರು ತಮ್ಮ ದೂರಿನಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ 2012–13ನೇ ಸಾಲಿನಲ್ಲಿ ಕೈಗೊಂಡಿರುವ "ಮಾವಿನಕಟ್ಟೆ ತಲ್ಲಾರ್ ಶೆಟ್ಟಳ್ಳಿ – ತಾಕೇರಿ – ಹರಗ – ಕಿಕ್ಕರಳ್ಳಿ" ರಸ್ತೆಯ ಕಿ.ಮೀ. 9.00 ರಿಂದ 12.00 ರವರೆಗಿನ ರಸ್ತೆ ಕಾಮಗಾರಿಯು ಕಳಪೆ ಕಾಮಗಾರಿಯಾಗಿದೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

3. ಸದರಿ ದೂರನ್ನು ದಾಖಲು ಮಾಡಿಕೊಂಡು ದೂರಿನಲ್ಲಿನ ಸತ್ಯಾಂಶ ಅರಿಯಲು, ದೂರಿನ ತನಿಖೆ ಮತ್ತು ವರದಿಗಾಗಿ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಕಡತವನ್ನು ಕಳುಹಿಸಿಕೊಡಲಾಯಿತು. ಅದರಂತೆ, ಸದರಿ ಮುಖ್ಯ ಅಭಿಯಂತರರು, ತಮ್ಮ ಅಧೀನ ಅಧಿಕಾರಿಯಾದ ಶ್ರೀ ಎಸ್. ಶ್ರೀಕಾಂತ್, ಸಹಾಯಕ ಕಾರ್ಯಪಾಲಕ ಅಬಿಯಂತರರು–5, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ದೂರಿನ ಬಗ್ಗೆ ತನಿಖೆಯನ್ನು ಮಾಡಿ ವರದಿ ಸಲ್ಲಿಸಲು ದೂರನ್ನು ವಹಿಸಿಕೊಟ್ಟಿರುತ್ತಾರೆ. ಸದರಿ ಶ್ರೀ ಎಸ್. ಶ್ರೀಕಾಂತ್, ಸಹಾಯಕ ಕಾರ್ಯಪಾಲಕ ಅಭಿಯಂತರರು–5 (ಇನ್ನು ಮುಂದೆ **"ತನಿಖಾಧಿಕಾರಿಗಳು"** ಎಂದು ಸಂಬೋಧಿಸಿಲಾಗುವುದು) ರವರು ದೂರಿನ ಮೇಲೆ ತನಿಖೆ ಮಾಡಿ, ಸಂಬಂಧಪಟ್ಟ ದಾಖಲಾತಿಗಳೊಂದಿಗೆ ವರದಿ

ಸಲ್ಲಿಸಿದ್ದು, ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಒಪ್ಪಿಕೊಂಡು, ಸದರಿ ವರದಿಯನ್ನು ಸಲ್ಲಿಸಿರುತ್ತಾರೆ.

4. ತನಿಖಾಧಿಕಾರಿಗಳ ವರದಿಯಲ್ಲಿ, ಸದರಿ ಡಾಂಬರು ರಸ್ತೆಯ ಮೇಲ್ಮೈ ಉಬ್ಬು ತಗ್ಗುಗಳಿಂದ ಕೂಡಿದ್ದು, ಅಲ್ಲಲ್ಲಿ ಹಳ್ಳಗಳಿದ್ದು, ಜಲ್ಲಿ ಕಾಣುತ್ತಿದ್ದು, ಪ್ಯಾಚ್ ವರ್ಕ್ ಮಾಡಿರುವುದು ತನಿಖೆಯಿಂದ ಕಂಡುಬಂದಿರುವದಲ್ಲದೆ, ಡಾಂಬರು ರಸ್ತೆಯಲ್ಲಿ ಬಳಸಲಾದ WMM ಪರಿಮಾಣ SDMC ಪರಿಮಾಣ ಹಾಗೂ ಬಿಟುಮಿನ್ ನ ಬಳಕೆಯು ಪರಿಮಾಣದಲ್ಲಿ ಮಂಜೂರಾದ ಅಂದಾಜು/ಅಳತೆ ಪುಸ್ತಕದಲ್ಲಿ ನಮೂದಿಸಿರುವ ವಿಶಿಷ್ಟ ವಿವರಣೆಯ ಅನುಸಾರವಾಗಿರದೇ, ಸಾಮಗ್ರಿ/ಐಟಂಗಳ ಅನುಷ್ಠಾನದಲ್ಲಿ ಕೊರತೆ ಕಂಡುಬಂದಿದ್ದು, ಸದರಿ ಕೊರತೆಯ ಆರ್ಥಿಕ ಪರಿಮಾಣವು ರೂ.7,45,539/- ಗಳಾಗಿದ್ದು, 1ನೇ ಎದುರುದಾರರು KPWA Code Vol 1, Para No.209 (d) & KPWD (D) Code Vol. II, para 301ರ ಮತ್ತು KPWD (D) Code Vol. II, Appendix VII ರ ಪ್ರಕಾರ, ಶೇಕಡ 37.5ರಂತೆ 7,45,539 x 37.5/2 x 100) = ರೂ. 1,39,789/- ಗಳಿಗೆ ಹಾಗೂ 4ನೇ ಎದುರುದಾರರು KPWA Code Vol 1, Para No.209 (d) & KPWD (D) Code Vol. II, para 301ರ ಮತ್ತು KPWD (D) Code Vol. II, Appendix VII ರ ಪ್ರಕಾರ, ಶೇಕಡ 37.5ರಂತೆ 7,45,539 x 37.5/100) = ರೂ. 2,79,577/- ಗಳಿಗೆ ಹೊಣೆಗಾರರಾಗಿರುತ್ತಾರೆಂದು ತಿಳಿಸಿದ್ದಾರೆ.

5. ತನಿಖಾಧಿಕಾರಿಯವರ ವರದಿಯನ್ನು ಪಡೆದ ನಂತರ 1 ರಿಂದ 4ನೇ ಎದುರುದಾರರ ಆಕ್ಷೇಪಣೆಗಳನ್ನು ಕೇಳಲಾಯಿತು. ಅದರಂತೆ, 1 ರಿಂದ 4ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

6. 1, 3 ಮತ್ತು 4ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ, ತನಿಖಾಧಿಕಾರಿಗಳು ಸದರಿ ಕಾಮಗಾರಿಯ ಪ್ರಮುಖ ದಾಖಲೆಗಳನ್ನು ಮತ್ತು ನಿಯಮಗಳನ್ನು ನೋಡಲು ವಿಫಲರಾಗಿದ್ದಾರೆ. ತನಿಖಾಧಿಕಾರಿಗಳು ಮೋರ್ಥ್ ಮಾರ್ಗದರ್ಶಿಯನ್ನು ಅನುಸರಿಸಿಲ್ಲ. ನಮೂದಿಸಿದ ಅಳತೆಗಳನ್ನು ಅವರು ಪರಿಗಣಿಸಬೇಕಾಗಿತ್ತು. ಉದ್ದವನ್ನು ಪರಿಗಣಿಸಬೇಕಾಗಿರಲಿಲ್ಲ. ತನಿಖಾಧಿಕಾರಿಗಳು ರಸ್ತೆಯ ಅಂಚು, ವಾಹನಗಳ ಅವ್ಯಾಹ ಸಂಚಾರದಿಂದ ಹಾಳಾಗಿವೆ ಎಂಬುದನ್ನು ಗಮನಿಸಿಲ್ಲ. ತನಿಖಾ ವರದಿ ತಪ್ಪು ಗ್ರಹಿಕೆಯಿಂದ ಹಾಗೂ ತಪ್ಪು ಹಣಕಾಸಿನ ಹೊಣೆಗಾರಿಕೆಯನ್ನು ಹೊರಿಸುವುದರಿಂದ ಕೂಡಿದೆ ಎಂದು ತಮ್ಮನ್ನು ಕೈಬಿಡಲು ಕೋರಿದ್ದಾರೆ. 3 ಮತ್ತು 4ನೇ ಎದುರುದಾರರು ಹೆಚ್ಚುವರಿಯಾಗಿ ಐ.ಆರ್.ಸಿ.ಎಸ್.ಪಿ–20ರಡಿಯ ಕಾಮಗಾರಿ ಪರೀಕ್ಷಾ ನಿಯಮಗಳಿಗೆ ವಿರುದ್ಧವಾದ ನಿಯಮಗಳನ್ನು ಪಾಲಿಸಿದ್ದಾರೆಂದು ತಿಳಿಸಿದ್ದಾರೆ.

7. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕಾಗಮಾರಿಯ Wet Mix Meacadam & S.D.M.C. ಕೆಲಸಗಳು ತನ್ನ ಅವಧಿಯಲ್ಲಿ ಕಾರ್ಯಗತಗೊಳಿಸಿರುವುದಿಲ್ಲ. ಕಳಪೆಯಾಗಿರುವ ಈ ಐಟಂಗಳಿಗೆ ತಾನು ಜವಾಬ್ದಾರನಾಗಿರುವುದಿಲ್ಲ. ಆದ್ದರಿಂದ, ತನ್ನನ್ನು ಈ ಪ್ರಕರಣದಿಂದ ಮುಕ್ತಗೊಳಿಸಬೇಕೆಂದು ಕೋರಿದ್ದಾರೆ.

8. ಆದರೆ, 1 ರಿಂದ 4ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ದೂರನ್ನು ಕೈಬಿಡಲು ಅಥವಾ ತಡೆಹಿಡಿಯಲು ಯಾವುದೇ ಸೂಕ್ತ ಅಥವಾ ಸಮಾಧಾನಕಾರಕ ಕಾರಣ ತೋರಿಸಿಲ್ಲ.

9. ಆದುದರಿಂದ, ಕಡತದಲ್ಲಿನ ಆಧಾರಗಳಿಂದ, ಈ ಕೆಳಕಂಡ ಅಂಶಗಳು ಸ್ಪಷ್ಟವಾಗುತ್ತವೆ.

(ಅ) ಡಾಂಬರು ರಸ್ತೆಯ ಮೇಲ್ಮೈ ಉಬ್ಬು ತಗ್ಗುಗಳಿಂದ ಕೂಡಿದ್ದು, ಅಲ್ಲಲ್ಲಿ ಹಳ್ಳಗಳಿದ್ದು, ಜಲ್ಲಿ ಕಾಣುತ್ತಿದ್ದು, ಪ್ಯಾಚ್ ವರ್ಕ್ ಮಾಡಿರುವುದು ತನಿಖೆಯಿಂದ ಕಂಡುಬಂದಿರುತ್ತದೆ.

(ಆ) ಅಲ್ಲದೆ, ಡಾಂಬರು ರಸ್ತೆಯಲ್ಲಿ ಬಳಸಲಾದ WMM ಪರಿಮಾಣ SDMC ಪರಿಮಾಣ ಹಾಗೂ ಬಿಟುಮಿನ್ ನ ಬಳಕೆಯು ಪರಿಮಾಣದಲ್ಲಿ ಮಂಜೂರಾದ ಅಂದಾಜು/ಅಳತೆ

ಪುಸ್ತಕದಲ್ಲಿ ನಮೂದಿಸಿರುವ ವಿಶಿಷ್ಟ ವಿವರಣೆಯ ಅನುಸಾರವಾಗಿರದೇ, ಸಾಮಗ್ರಿ/ಐಟಂಗಳ ಅನುಷ್ಠಾನದಲ್ಲಿ ಕೊರತೆ ಕಂಡುಬಂದಿದ್ದು, ಸದರಿ ಕೊರತೆಯ ಆರ್ಥಿಕ ಪರಿಮಾಣವು ರೂ.7,45,539/- ಗಳಾಗಿರುತ್ತದೆ.

(ಇ) ಅದರಂತೆ 1ನೇ ಎದುರುದಾರರು KPWA Code Vol 1, Para No.209 (d) & KPWD (D) Code Vol. II, para 301ರ ಮತ್ತು KPWD (D) Code Vol. II, Appendix VII ರ ಪ್ರಕಾರ, ಶೇಕಡ 37.5ರಂತೆ 7,45,539 x 37.5/2 x 100) = ರೂ. 1,86,384/- ಗಳಿಗೆ ಹೊಣೆಗಾರರಾಗಿರುತ್ತಾರೆ.

(ಈ) 2ನೇ ಎದುರುದಾರರು KPWA Code Vol 1, Para No.209 (d) & KPWD (D) Code Vol. II, para 301ರ ಮತ್ತು KPWD (D) Code Vol. II, Appendix VII ರ ಪ್ರಕಾರ, ಶೇಕಡ 37.5ರಂತೆ 7,45,539 x 37.5/2 x 100) = ರೂ. 2,39,789/- ಗಳಿಗೆ ಹೊಣೆಗಾರರಾಗಿರುತ್ತಾರೆ.

(ಉ) 3ನೇ ಎದುರುದಾರರು KPWA Code Vol 1, Para No.209 (d) & KPWD (D) Code Vol. II, para 301ರ ಮತ್ತು KPWD (D) Code Vol. II, Appendix VII ರ ಪ್ರಕಾರ, ಶೇಕಡ 37.5ರಂತೆ 7,45,539 x 37.5/2 x 100) = ರೂ. 1,39,789/- ಗಳಿಗೆ ಹೊಣೆಗಾರರಾಗಿರುತ್ತಾರೆ.

(ಊ) 4ನೇ ಎದುರುದಾರರು KPWA Code Vol 1, Para No.209 (d) & KPWD (D) Code Vol. II, para 301ರ ಮತ್ತು KPWD (D) Code Vol. II, Appendix VII ರ ಪ್ರಕಾರ, ಶೇಕಡ 37.5ರಂತೆ 7,45,539 x 37.5/2 x 100) = ರೂ. 2,79,577/- ಗಳಿಗೆ ಹೊಣೆಗಾರರಾಗಿರುತ್ತಾರೆ.

(ಋ) ಉಳಿದಂತೆ, 1 ರಿಂದ 4ನೇ ಎದುರುದಾರರು ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ವಿವರಿಸಿರುವಂತೆ ಕರ್ತವ್ಯಲೋಪವೆಸಗಿರುತ್ತಾರೆ.

10. ದೂರು, ತನಿಖಾ ವರದಿ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ 1 ರಿಂದ 4ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ

ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, 1 ರಿಂದ 4ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

11. Since, the facts and material on record prima-facie show that you DGOs 1 to 4 have committed misconduct under Rule 3(1)(ii) & (iv) of KCS (Conduct) Rules, 1966, acting under section 12(3) of the Karnataka Lokayukta Act, recommendation was made to the Competent Authority to initiate disciplinary proceedings against you DGOs 1 to 4. The Govt. after consideration of materials, has entrusted enquiry to Hon'ble Upalokayukta. Hence the charge.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರುಗಳು ದಿನಾಂಕ: 01/09/2016 ರಂದು ಹಾಜರಾಗಿದ್ದು, ಆ.ಸ.ನೌ.ರವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರುಗಳಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರುಗಳಿಂದ ರಕ್ಷಣಾ ಹೇಳಿಕೆಯನ್ನು ಕೇಳಲಾಗಿತ್ತು.

7. ಆ.ಸ.ನೌರವರಲ್ಲಿ, 2ನೇ ಆ.ಸ.ನೌರವರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ಕಾಮಗಾರಿಯ Wet Mix Mecadam and S.D.B.C ಕೆಲಸಗಳು ತನ್ನ ಅವಧಿಯಲ್ಲಿ ಕಾರ್ಯಗತಗೊಳಿಸಿರುವುದಿಲ್ಲ. ಕಳಪೆಯಾಗಿರುವ ಈ ಐಟಂಗಳಿಗೆ ತಾನು ಜವಾಬ್ದಾರನಾಗಿರುವುದಿಲ್ಲ. ಆದರಿಂದ, ಈ ಪ್ರಕರಣದಿಂದ ತನ್ನನ್ನು ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ. ಉಳಿದಂತೆ ಆ.ಸ.ನೌ–1, 3 ಮತ್ತು 4 ರವರುಗಳು ಆಪಾದಿತ ಕಾಮಗಾರಿಗೆ ಸಂಬಂಧಪಟ್ಟಂತೆ ತಾವು ಯಾವುದೇ ರೀತಿಯ ಕರ್ತವ್ಯ ಲೋಪ, ಕರ್ತವ್ಯ ಚ್ಯುತಿ ಎಸಗಿರುವುದಿಲ್ಲ. ತಮ್ಮ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸಲಾಗಿದೆ ಎಂದು ತಿಳಿಸಿರುತ್ತಾರೆ.

8. ಈ ವಿಚಾರಣೆಯಲ್ಲಿ, ಆ.ಸ.ನೌ.ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು **ಪಿ.ಡಬ್ಲ್ಯೂ.1** ಎಂದು ಸಾಕ್ಷ್ಯ ನುಡಿಸಿಕೊಂಡು, ತನಿಖಾಧಿಕಾರಿಯಾಗಿ ಈ ಪ್ರಕರಣದಲ್ಲಿ ತನಿಖೆ ಕೈಗೊಂಡ ವರದಿಯನ್ನು ನೀಡಿರುವಂತಹ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದ ಶ್ರೀ. ಎಸ್ ಶ್ರೀಕಾಂತ್ ರವರನ್ನು **ಪಿ.ಡಬ್ಲ್ಯೂ.2** ಎಂದು ಸಾಕ್ಷ್ಯ ನುಡಿಸಿಕೊಂಡು ಒಟ್ಟು ನಿ.ಪಿ.1 ರಿಂದ 17 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಆ.ಸ.ನೌರವರುಗಳ ದ್ವಿತೀಯ ಮೌಖಿಕ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತ್ತದೆ. ತದನಂತರ, ಆ.ಸ.ನೌ–2, 1, 3 ಮತ್ತು 4 ರವರು ಅನುಕ್ರಮವಾಗಿ **ಡಿ.ಡಬ್ಲ್ಯೂ.1 ರಿಂದ 4** ಎಂದು ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ. ನಿ.ಡಿ.1 ರಿಂದ ನಿ.ಡಿ.28 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಆಲಿಸಲಾಯಿತು.

10. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–1 ರಿಂದ 4 ರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

11. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1:** ಆ.ಸ.ನೌ–1, 3 ಮತ್ತು 4 ರವರ ವಿರುದ್ಧ **"ಸಕಾರಾತ್ಮಕವಾಗಿ"**
ಆ.ಸ.ನೌ–2 ರವರ ವಿರುದ್ಧ **"ನಕಾರಾತ್ಮಕವಾಗಿ"**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

13. ಈ ಪ್ರಕರಣದಲ್ಲಿ ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ **ಶ್ರೀ. ಪ್ರಕಾಶ್ ಹೆಚ್.ಎಂ** ತಂದೆ ಹೆಚ್.ಎಸ್ ಮಂದಣ್ಣ, ಹರಗ ಗ್ರಾಮ, ಶಾಂತಳ್ಳಿ ಅಂಚೆ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ರವರನ್ನು ಪಿ.ಡಬ್ಲೂ.1 ಎಂದು ಸಾಕ್ಷ್ಯ ನುಡಿಸಿಕೊಂಡಿರುತ್ತಾರೆ. ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ "2012–13ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆ ಸೋಮವಾರಪೇಟೆ ವತಿಯಿಂದ ಮಾವಿನಕಟ್ಟೆಯಿಂದ ಪ್ರಾರಂಭ ಮಾಡಿ ಕಿಕ್ಕರಹಳ್ಳಿ ತನಕ 12 ಕಿ.ಮೀ. ಉದ್ದದ ರಸ್ತೆಯನ್ನು ನಿರ್ಮಾಣ ಮಾಡಿದ್ದರು. ಮಾವಿನಕಟ್ಟೆ ಮತ್ತು ಕಿಕ್ಕರಹಳ್ಳಿ ನಡುವೆ ತಲ್ತಾರ್‌ಶೆಟ್ಟಹಳ್ಳಿ, ತಾಕೇರಿ ಮತ್ತು ಹರಗ ಹಳ್ಳಿಗಳು ಬರುತ್ತವೆ. 9ನೇ ಕಿ.ಮೀ. ನಿಂದ 12ನೇ ಕಿ.ಮೀ. ನಡುವೆ ರಸ್ತೆ ನಿರ್ಮಾಣ ಆದ ನಾಲ್ಕು ತಿಂಗಳ ಅವಧಿಯಲ್ಲಿ ಡಾಂಬರ್ ಕಿತ್ತು ಹೋಗಿ ಗುಂಡಿಗಳು ಬಿದ್ದು ಜಲ್ಲಿ ಕಿತ್ತು ಬಂದು ರಸ್ತೆ ಹಾಳಾಗಿತ್ತು.

ಕಾಮಗಾರಿ ಕಳಪೆ ಆದ ಬಗ್ಗೆ ಆ.ಸ.ನೌ.ರರ ಗಮನಕ್ಕೆ ತಂದರೂ ಸಹ ಆ.ಸ.ನೌ.ರರು ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ಅದೇ ಕಾರಣ ನಾನು 2014ನೇ ಸಾಲಿನಲ್ಲಿ ಈ ಸಂಸ್ಥೆಗೆ ದೂರು ಕೊಟ್ಟಿರುತ್ತೇನೆ...................... ನಾನು ಈ ಸಂಸ್ಥೆಗೆ ದೂರು ನೀಡಿದ ನಂತರ ತನಿಖಾಧಿಕಾರಿ ಸ್ಥಳ ಪರಿಶೀಲನೆ ಮಾಡಿದ್ದಾರೆ. ಆ ಸಮಯದಲ್ಲಿ ನಾನು ಹಾಜರಿದ್ದು ಮಹಜರ್‌ಗೆ ಸಹಿ ಹಾಕಿರುತ್ತೇನೆ. ಎರಡು ಸ್ಥಳಗಳಲ್ಲಿ ಗುಂಡಿ ತೆಗೆದು ಮಾದರಿಯನ್ನು ಪರೀಕ್ಷೆ ಸಲುವಾಗಿ ಪಡೆದಿದ್ದಾರೆ" ಎಂದು ನುಡಿದಿರುತ್ತಾರೆ.

14. ದೂರುದಾರರು ನೀಡಿದ ದೂರನ್ನು ನಿ.ಪಿ.1 ಎಂತಲೂ, ನಮೂನೆ-1 ಮತ್ತು 2ನ್ನು ನಿ.ಪಿ.2 ಮತ್ತು 3 ಎಂತಲೂ, ದೂರಿನೊಂದಿಗೆ ಕಾಮಗಾರಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳು ಒಟ್ಟು 12 ಪುಟಗಳಲ್ಲಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.4 ಎಂತಲೂ, ಛಾಯಾಚಿತ್ರದ ನಕಲು ಪ್ರತಿಯನ್ನು ನಿ.ಪಿ.5 ಎಂತಲೂ, ತನಿಖಾಧಿಕಾರಿ ಮಾಡಿ ಮಹಜರ್ ಅನ್ನು ನಿ.ಪಿ.6 ಎಂತಲೂ ಗುರುತುಪಡಿಸಿಕೊಳ್ಳಲಾಗಿದೆ.

15. ದೂರುದಾರರು ತಮ್ಮ ಪಾಟಿಸವಾಲಿನಲ್ಲಿ "ಈ ಸಂಸ್ಥೆಗೆ ದಿನಾಂಕ: 18/03/2014 ರಂದು ದೂರು ಸಲ್ಲಿಸುವ ಮೊದಲು ಆ.ಸ.ನೌ.ರರ ಮೇಲಾಧಿಕಾರಿ ಮಡಿಕೇರಿ ಮುಖ್ಯ ಇಂಜಿನಿಯರ್ ಲೋಕೋಪಯೋಗಿ ಇಲಾಖೆಗೆ ಲಿಖಿತ ದೂರು ಮಾಡಿದ್ದೇನೆ. ಈ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ಕಳಪೆ ಕಾಮಗಾರಿ ಎಂದು ಹೇಳಲು ನನಗೆ ಸಾಮಾನ್ಯ ಅನುಭವ ಮತ್ತು ಜ್ಞಾನ ಇದೆ. 1ನೇ ಕಿ.ಮೀ. ನಿಂದ 12ನೇ ಕಿ.ಮೀ. ತನಕ ಕಳಪೆ ಕಾಮಗಾರಿ ಇದೆ. ಕಾಮಗಾರಿಯನ್ನು ವಸಂತ ಗುತ್ತಿಗೆದಾರರಿಗೆ ನೀಡಲಾಗಿತ್ತು................ ಸದರಿ ಕಾಮಗಾರಿಯನ್ನು ಗುತ್ತಿಗೆದಾರರು ಸರಿಯಾಗಿ ಮಾಡಿದ್ದಾರೆ ಮತ್ತು ಆ.ಸ.ನೌ.ರರು ಕಾಮಗಾರಿಯನ್ನು ಸರಿಯಾಗಿ ಮೇಲ್ವಿಚಾರಣೆ ಮಾಡಿದ್ದಾರೆ ಎಂದರೆ ಸರಿಯಲ್ಲ" ಎಂದು ನುಡಿದಿರುತ್ತಾರೆ. ದೂರುದಾರರು ತಮ್ಮ ಮುಖ್ಯ ವಿಚಾರಣೆ ಹಾಗೂ ಪಾಟಿಸವಾಲು ಎರಡರಲ್ಲೂ 1 ಕಿ.ಮೀ. ನಿಂದ 12 ಕಿ.ಮೀ. ವರೆಗೆ ಕಳಪೆ ಕಾಮಗಾರಿ ಮಾಡಿದ್ದಾರೆ ಎಂದಿದ್ದಾರೆ ಮತ್ತು ಈ ಬಗ್ಗೆ ತಾನು ತನ್ನ ಸಾಮಾನ್ಯ ಅನುಭವ ಮತ್ತು ಜ್ಞಾನದಿಂದ ಹೇಳುತ್ತಿದ್ದೇನೆ ಎಂದು ಒಪ್ಪಿರುತ್ತಾರೆ.

16. ಪ್ರಸ್ತುತ ಕಾಮಗಾರಿ ರಸ್ತೆ ಕಾಮಗಾರಿಯಾದ್ದರಿಂದ ಮತ್ತು ಕಳಪೆ ಕಾಮಗಾರಿ ಎಂದು ಆಪಾದನೆ ಇದ್ದುದರಿಂದ ಈ ಸಂಸ್ಥೆಯ ತಾಂತ್ರಿಕ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದ ಶ್ರೀ. ಎಸ್ ಶ್ರೀಕಾಂತ್ ರವರನ್ನು ತನಿಖಾಧಿಕಾರಿಯಾಗಿ ಈ ಸಂಸ್ಥೆ ನೇಮಿಸಿ, ಸ್ಥಳ ಪರಿಶೀಲಿಸಿ ವರದಿ ನೀಡಬೇಕೆಂದು ಆದೇಶ ಮಾಡಲಾಗಿತ್ತು. ಸದರಿಯವರು ಸ್ಥಳ ಪರಿಶೀಲಿಸಿ ತಮ್ಮ ವರದಿಯನ್ನು ಈ ಸಂಸ್ಥೆಗೆ ನೀಡಿರುತ್ತಾರೆ. ಅಲ್ಲದೇ, ಸದರಿ ತನಿಖಾಧಿಕಾರಿಯವರನ್ನು ಮಾನ್ಯ ಮಂಡನಾಧಿಕಾರಿಯವರು ಪಿ.ಡಬ್ಲೂ.2 ಎಂದು ಸಾಕ್ಷ್ಯ ನುಡಿಸಿಕೊಂಡು ಸದರಿಯವರಿಂದ ನಿ.ಪಿ.7 ರಿಂದ 17 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ "ದಿನಾಂಕ: 26/08/2015 ರಂದು ನಾನು ಸ್ಥಳಕ್ಕೆ ಭೇಟಿ ನೀಡಿದಾಗ ದೂರುದಾರರು ಸೇರಿದಂತೆ ಅಂದು ಕರ್ತವ್ಯನಿರತ ಅಧಿಕಾರಿಗಳು ಮತ್ತು ಎಇಇ ಮತ್ತು ಎಇ ಗುಣಭರವಸೆ ಉಪವಿಭಾಗ, ಮಂಗಳೂರು ಹಾಗೂ 4ನೇ ಆ.ಸ.ನೌ.ರರು ಶ್ರೀ. ಬಿ.ಜಿ ಭಾಸ್ಕರ್ ಹಾಜರು ಇದ್ದರು. ದೂರುದಾರರು ಆಪಾದಿತ ರಸ್ತೆಯಲ್ಲಿ 6.50 ಕಿ.ಮೀ. ರಿಂದ 7.39 ಕಿ.ಮೀ. ಕಾಮಗಾರಿ ಕಳಪೆ ಮಟ್ಟದ್ದು ಆಗಿದ್ದು ರಸ್ತೆಯ ಉದ್ದ ಮತ್ತು ಅಗಲ ಅಂದಾಜುಪಟ್ಟಿಯಲ್ಲಿ ನಮೂದಿಸಿದಂತೆ ಇರುವುದಿಲ್ಲ ಮತ್ತು ರಸ್ತೆಯು ಸಾಕಷ್ಟು ಕಡೆ ಹಾಳಾದ ಬಗ್ಗೆ ತೋರಿಸಿದ್ದರು. ನಾನು ದೂರುದಾರರ ಮತ್ತು 4ನೇ ಆ.ಸ.ನೌ.ರರ ಜೊತೆ ಜೀಪ್‌ನಲ್ಲಿ ಸಂಪೂರ್ಣ ಆಪಾದಿತ ರಸ್ತೆಯ ವಿಡಿಯೋ ಚಿತ್ರಿಕರಣ ಮಾಡಿದ್ದೇನೆ. ನಾನು ಗಮನಿಸಿದಂತೆ ರಸ್ತೆಯ ಮೇಲ್ಮೈ ಉಬ್ಬು ತಗ್ಗುಗಳಿಂದ ಕೂಡಿದ್ದು ಅಲ್ಲಲ್ಲಿ ಹಳಗಳು ಇದ್ದು ಜೆಲ್ಲಿ ಕಾಣಿಸುತ್ತಿದ್ದು ಪ್ಯಾಚ್ ವರ್ಕ್ ಮಾಡಿದ ಬಗ್ಗೆ ಕಂಡು ಬಂದಿದೆ............. ರಸ್ತೆಯ ಉದ್ದ ಮತ್ತು ಅಗಲವನ್ನು ಅಳತೆ ಮಾಡಿದ್ದೇನೆ. ರಸ್ತೆಯ ಉದ್ದ 870 ಮೀ. ಮತ್ತು ರಸ್ತೆಯ ಅಗಲ ಸರಾಸರಿ 3.155 ಮೀ. ಇರುತ್ತದೆ. ಚೈನೇಜ್ 6.59 ಕಿ.ಮೀ. ಹಾಗೂ 7.01 ಕಿ.ಮೀ.ನಲ್ಲಿ ಪರೀಕ್ಷಾ ಗುಂಡಿಗಳನ್ನು ತೆಗೆದು ರಸ್ತೆಯಲ್ಲಿನ ಡಬ್ಲ್ಯುಎಂಎಂ ಮತ್ತು ಎಸ್‌ಡಿಬಿಸಿ ಪದರಗಳ ವಿವರಗಳನ್ನು ಗುಣಭರವಸೆ ಉಪವಿಭಾಗದ ಎಇ ಮತ್ತು ಎಇಇ ಅವರ ಸಹಾಯದೊಂದಿಗೆ ಪರಿಶೀಲಿಸಿದ್ದು ಅವುಗಳ ದಪ್ಪ ಮತ್ತು ಇತರೆ ಅಂಶಗಳನ್ನು ಮಹಜರ್‌ನಲ್ಲಿ ವಿವರವಾಗಿ ನಮೂದಿಸಿದ್ದೇನೆ" ಎಂದು ನುಡಿದಿರುತ್ತಾರೆ. ಮಹಜರ್ ಅನ್ನು ನಿ.ಪಿ.10 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಸ್ಥಳ ತನಿಖೆಯ ಕಾಲದಲ್ಲಿ

ಮಾಡಿದ ವಿಡಿಯೋ ಸಿ.ಡಿ.ಯನ್ನು ನಿ.ಪಿ.14 ಎಂತಲೂ, ಛಾಯಾಚಿತ್ರಗಳನ್ನು ನಿ.ಪಿ.15 ಎಂತಲೂ, ಇವರ ತನಿಖಾ ವರದಿಯನ್ನು ನಿ.ಪಿ.17 ಎಂತಲೂ ಗುರುತುಪಡಿಸಿಕೊಳ್ಳಲಾಗಿದೆ. ಸದರಿಯವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ **"ಲಭ್ಯ ಇದ್ದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ, ವಿಶ್ಲೇಷಿಸಿ ಮತ್ತು ಗುಣಭರವಸೆ ಉಪವಿಭಾಗ ಮಂಗಳೂರು ಅವರು ನೀಡಿದ ಫಲಿತಾಂಶದ ವಿವರಗಳನ್ನು ಮತ್ತು ಆ.ಸ.ನೌ.ರರು ಕಡತದಲ್ಲಿ ಹಾಜರು ಮಾಡಿದ ಅಂದಾಜುಪಟ್ಟಿಯ ನಕಲನ್ನು ಗಣನೆಗೆ ತೆಗೆದುಕೊಂಡು ನಾನು ವಿವರವಾದ ತನಿಖಾ ವರದಿಯನ್ನು ಸಲ್ಲಿಸಿದ್ದೇನೆ................ ತನಿಖಾ ವರದಿ ಪುಟ ಸಂಖ್ಯೆ 11ರ ಕಂಡಿಕೆ 4.01ರಲ್ಲಿ ನನ್ನ ತನಿಖಾ ಫಲಿತಾಂಶ ಹಾಗೂ ಅಭಿಪ್ರಾಯವನ್ನು ನಮೂದು ಮಾಡಿದ್ದೇನೆ. ಅದರ ಅನುಸಾರ ರೂ.7,45,539/-ಗಳ ಆರ್ಥಿಕ ಪ್ರಮಾಣದ ಲೋಪ ಕಂಡುಬಂದಿದೆ. ಸದರಿ ಆರ್ಥಿಕ ಪ್ರಮಾಣದ ಲೋಪಕ್ಕೆ ಜವಾಬ್ದಾರಿ ಆದ 1 ರಿಂದ 4ನೇ ಆ.ಸ.ನೌ.ರರ ವಿವರಗಳನ್ನು ತನಿಖಾ ವರದಿ ಪುಟ ಸಂಖ್ಯೆ 12 ರಿಂದ 14ರಲ್ಲಿನ ಕಂಡಿಕೆ 4.02ರಲ್ಲಿ ವಿವರಿಸಿದ್ದೇನೆ. ರಸ್ತೆ ಕಾಮಗಾರಿ ಕಳಪೆ ಮಟ್ಟದಿಂದ ಕೂಡಿದ ಬಗ್ಗೆ ಅಭಿಪ್ರಾಯಪಟ್ಟಿದ್ದೇನೆ"** ಎಂದು ನುಡಿದಿರುತ್ತಾರೆ.

17. ತನಿಖಾಧಿಕಾರಿಯವರು ಸಲ್ಲಿಸಿದ ತನಿಖಾ ವರದಿ ನಿ.ಪಿ.17 ಅನ್ನು ಪರಿಶೀಲಿಸಲಾಗಿ, ಅದರಲ್ಲಿ ಅವರು ಅನುಸರಿಸಿದ ತನಿಖಾ ವಿಧಾನಗಳು, ಸ್ಥಳ ತನಿಖೆಯಿಂದ ಕಂಡುಬಂದ ಅಂಶಗಳು ಮತ್ತು ತನಿಖಾ ಫಲಿತಾಂಶಗಳು/ಅಭಿಪ್ರಾಯವನ್ನು ಸ-ವಿವರವಾಗಿ ವರದಿ ಮಾಡಿರುತ್ತಾರೆ. ತನಿಖಾ ಸಮಯದಲ್ಲಿ ದೂರುದಾರರು, ಆ.ಸ.ನೌ.ರವರೆಲ್ಲರೂ ಹಾಜರಿರುವುದು ತನಿಖಾ ವರದಿಯಿಂದಲೂ ಮತ್ತು ಮಹಜರ್‌ನಿಂದಲೂ ತಿಳಿದುಬರುತ್ತದೆ. ತನಿಖಾಧಿಕಾರಿ ಮಾಡಿದ ಮಹಜರ್‌ಗೆ ಆ.ಸ.ನೌ.ರವರೆಲ್ಲರೂ ಸಹಿ ಮಾಡಿರುತ್ತಾರೆ. ಅಲ್ಲದೇ, ಸ್ಥಳ ತನಿಖೆಯ ಸಮಯಕ್ಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಸಹಾಯಕ ಇಂಜಿನಿಯರ್ ಗುಣಭರವಸೆ ಉಪ ವಿಭಾಗ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ರವರು ಅಗತ್ಯ ಸಾಮಗ್ರಿಗಳು ಮತ್ತು ಸಲಕರಣೆಗಳು ಹಾಗೂ ಸಿಬ್ಬಂದಿಯೊಂದಿಗೆ ಹಾಜರಿದ್ದುದ್ದು ಸಹ ಕಂಡುಬರುತ್ತದೆ. ತನಿಖೆಯ ಫಲಿತಾಂಶವನ್ನು ಈ ಕೆಳಕಂಡಂತೆ ನೀಡಿರುತ್ತಾರೆ:

<u>ತನಿಖೆಯ ಅಂತಿಮ ಅಭಿಪ್ರಾಯ/ಫಲಿತಾಂಶ:-</u>

"4.01 ಕೊಡಗು ಜಿಲ್ಲೆ ಸೋಮವಾರಪೇಟೆ ಲೋಕೋಪಯೋಗಿ ಉಪವಿಭಾಗದ

ವತಿಯಿಂದ 2012-13ರಲ್ಲಿ ಕೈಗೊಂಡಿರುವ ಮಾವಿನಕಟ್ಟೆ ತಲ್ತಾರ್ ಶೆಟ್ಟಳ್ಳಿ - ತಾಕೇರಿ - ಹರಗ - ಕಿಕ್ಕರಳ್ಳಿ ರಸ್ತೆಯ ಅಭಿವೃದ್ಧಿ ಕಾಮಗಾರಿಯಲ್ಲಿ ಕಳಪೆ ಮಟ್ಟದ ಡಾಂಬರು ಮತ್ತು ಸಾಮಗ್ರಿಗಳನ್ನು ಉಪಯೋಗಿಸಿರುವುದರಿಂದ, ರಸ್ತೆ ಕಾಮಗಾರಿಯನ್ನು ಮಾಡಿದ ಕೇವಲ 6 ತಿಂಗಳಲ್ಲಿ ರಸ್ತೆಯು ತೀರಾ ಹದಗೆಟ್ಟಿದ್ದು, ಕಾಮಗಾರಿಯು ಕಳಪೆಯಾಗಿರುವುದಾಗಿ ಮಾಡಲಾಗಿರುವ ಆಪಾದನೆಗೆ ಸಂಬಂಧಿಸಿದಂತೆ, ಸ್ಥಳ ಪರಿಶೀಲನೆಯ ಹಾಗೂ ಗುಣಭರವಸೆ ಪರೀಕ್ಷೆಯಿಂದ ಲಭ್ಯವಾದ ಫಲಿತಾಂಶದ ಆಧಾರದ ಮೇರೆಗೆ, ಸದರಿ ಡಾಂಬರು ರಸ್ತೆಯ ಮೇಲ್ಮೈ ಉಬ್ಬು ತಗ್ಗುಗಳಿಂದ ಕೂಡಿದ್ದು, ಅಲ್ಲಲ್ಲಿ ಹಳ್ಳಗಳಿದ್ದು, ಜಲ್ಲಿ ಕಾಣಿಸುತ್ತಿದ್ದು, patch work ಮಾಡಿರುವುದು ತನಿಖೆಯಲ್ಲಿ ಕಂಡು ಬಂದಿರುವುದಲ್ಲದೇ, ಡಾಂಬರು ರಸ್ತೆಯಲ್ಲಿ ಬಳಸಲಾದ WMM ಪರಿಮಾಣ, SDBC ಪರಿಮಾಣ ಹಾಗೂ Bitumen Content ನ ಬಳಕೆಯ ಪರಿಮಾಣದಲ್ಲಿ ಮಂಜೂರಾದ ಅಂದಾಜು/ಅಳತೆ ಪುಸ್ತಕದಲ್ಲಿ ನಮೂದಿಸಿರುವ ವಿಶಿಷ್ಟ ವಿವರಣೆಯಲ್ಲಿನ ವಿವರಗಳಿಗೆ ಅನುಗುಣವಾಗಿ ಇರದೇ, ಸಾಮಗ್ರಿ/ಐಟಂಗಳ ಅನುಷ್ಠಾನದಲ್ಲಿ ಕೊರತೆ ಕಂಡು ಬಂದಿರುವ ಹಿನ್ನೆಲೆಯಲ್ಲಿ, ಈ ಕೊರತೆಯ ಆರ್ಥಿಕ ಪ್ರಮಾಣವು ಮೇಲಿನ ಕಂಡಿಕೆ 3.20 ರಲ್ಲಿ ವಿವರಿಸಿರುವಂತೆ (ಪ್ರಸ್ತುತ ಆಪಾದಿತ ಡಾಂಬರ್ ರಸ್ತೆಯ ಅನುಷ್ಠಾನದಲ್ಲಿ ಸಾಮಗ್ರಿಗಳ ಬಳಕೆಯ ಕೊರತೆಯಿಂದ ಆಗಿರುವ ಒಟ್ಟಾರೆ ಆರ್ಥಿಕ ವ್ಯತ್ಯಯವು (ಅ) Wet Mix Macadam = ರೂ.6,47,831/- (ಆ) Semi dense Bituminous Concrete = ರೂ.76,800/- ಹಾಗೂ (ಇ) Bitumen Content in SDBC = ರೂ.20,908/- ಗಳಾಗಿದ್ದು, **ಒಟ್ಟಾರೆ ಕೊರತೆಯ ಆರ್ಥಿಕ ಮೊತ್ತವು = ರೂ.7,45,539/- ಗಳಾಗಿರುತ್ತದೆ)** ರೂ.7,45,539/- ಗಳಾಗಿದ್ದು, ಸದರಿ ಕೊರತೆ/ಲೋಪಕ್ಕೆ ಕೆಳಕಂಡ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ.

4.02

(ಅ) ಶ್ರೀ ದೊಡ್ಡಸಿದ್ದಯ್ಯ, ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ ಇವರು ಹಾಲಿ ಕಾರ್ಯಪಾಲಕ ಇಂಜಿನಿಯರ್ ಆಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ ಡಾಂಬರು ರಸ್ತೆ ಅನುಷ್ಠಾನದಲ್ಲಿ ಬಳಸಲಾದ WMM ಪರಿಮಾಣ, SDBC ಪರಿಮಾಣ ಹಾಗೂ Bitumen ಸಾಮಗ್ರಿ ಬಳಕೆಯ ವ್ಯತ್ಯಯದಿಂದಾಗಿ ಕಳಪೆ ಮಟ್ಟದ ರಸ್ತೆ ಕಾಮಗಾರಿಯಾಗಿ ನಿರ್ಮಾಣವಾಗಿ, ಇದರಿಂದ ಉಂಟಾಗಿರುವ ಕೊರತೆಯಲ್ಲಿ, KPWA Code Vol 1, Para No.209 (d), KPWD (D) Code, Vol 1, Para No.301 ರ ಮತ್ತು KPWD (D) Code Vol II, Appendix VII ರ ಪ್ರಕಾರ, **ಶೇಕಡ 25 ರಂತೆ, ರೂ. (7,45,539 x 25/100) = ರೂ.1,86,384/-ಗಳ ಕೊರತೆ/ಲೋಪಕ್ಕೆ ಹೊಣೆಗಾರರಾಗಿರುತ್ತಾರೆ.**

(ಆ) ಶ್ರೀ ರಾಮಕೃಷ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಸೋಮವಾರಪೇಟೆ ಉಪವಿಭಾಗ ಇವರು ಹಾಲಿ ಕಾರ್ಯಪಾಲಕ ಇಂಜಿನಿಯರ್ ಆಗಿ ವರುಣಾ ನಾಲಾ ವಿಭಾಗ, ಮೈಸೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ ಡಾಂಬರು ರಸ್ತೆ ಅನುಷ್ಠಾನದಲ್ಲಿ ಬಳಸಲಾದ WMM ಪರಿಮಾಣ, SDBC ಪರಿಮಾಣ ಹಾಗೂ Bitumen ಸಾಮಗ್ರಿ ಬಳಕೆಯ ವ್ಯತ್ಯಯದಿಂದಾಗಿ ಕಳಪೆ ಮಟ್ಟದ ರಸ್ತೆ ಕಾಮಗಾರಿಯಾಗಿ ನಿರ್ಮಾಣವಾಗಿ, ಇದರಿಂದ ಉಂಟಾಗಿರುವ ಕೊರತೆಯಲ್ಲಿ, KPWA Code Vol 1, Para No.209 (d), KPWD (D) Code, Vol 1, Para No.301 ರ ಮತ್ತು KPWD (D) Code Vol II, Appendix VII ರ ಪ್ರಕಾರ, **ಶೇಕಡ 37.5 ರಂತೆ, (ಮತ್ತೊಬ್ಬ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರೂ ಭಾಗಿಯಾಗಿರುವುದರಿಂದ ಶೇ.37.5/2 ರಂತೆ) ರೂ. (7,45,539 x 37.5/2 x 100) = ರೂ.1,39,789/-ಗಳ ಕೊರತೆ/ಲೋಪಕ್ಕೆ ಹೊಣೆಗಾರರಾಗಿರುತ್ತಾರೆ.**

(ಇ) ಶ್ರೀ ಟಿ.ಹೆಚ್. ಲಿಂಗರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖಾ ಸೋಮವಾರಪೇಟೆ ಉಪವಿಭಾಗ ಇವರು ದಿನಾಂಕ 31/03/2015ರಂದು ಸರ್ಕಾರಿ ಸೇವೆಯಿಂದ ನಿವೃತ್ತಿಯಾಗಿ, ನಂ.1, ಬ್ಲಾಕ್ ನಂ. 12, ಮಧುವನ ಬಡಾವಣೆ, ಶ್ರೀರಾಮಪುರ-2 ಸ್ಟೇಜ್, ಮೈಸೂರು – 570023 ನಿವಾಸದಲ್ಲಿ ವಾಸಿಸುತ್ತಿದ್ದು, ಪ್ರಸ್ತುತ ಡಾಂಬರು ರಸ್ತೆ ಅನುಷ್ಠಾನದಲ್ಲಿ ಬಳಸಲಾದ WMM ಪರಿಮಾಣ, SDBC ಪರಿಮಾಣ ಹಾಗೂ Bitumen ಸಾಮಗ್ರಿ ಬಳಕೆಯ ವ್ಯತ್ಯಯದಿಂದಾಗಿ ಕಳಪೆ ಮಟ್ಟದ ರಸ್ತೆ ಕಾಮಗಾರಿಯಾಗಿ ನಿರ್ಮಾಣವಾಗಿ, ಇದರಿಂದ ಉಂಟಾಗಿರುವ ಕೊರತೆಯಲ್ಲಿ, KPWA Code Vol 1, Para No.209 (d), KPWD (D) Code, Vol 1, Para No.301 ರ ಮತ್ತು KPWD (D) Code Vol II, Appendix VII ರ ಪ್ರಕಾರ, **ಶೇಕಡ 37.5 ರಂತೆ, (ಮತ್ತೊಬ್ಬ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರೂ ಭಾಗಿಯಾಗಿರುವುದರಿಂದ ಶೇ.37.5/2 ರಂತೆ) ರೂ. (7,45,539 x 37.5/2 x 100) = ರೂ.1,39,789/-ಗಳ ಕೊರತೆ/ಲೋಪಕ್ಕೆ ಹೊಣೆಗಾರರಾಗಿರುತ್ತಾರೆ.**

(ಈ) **ಶ್ರೀ ಬಿ.ಜಿ. ಭಾಸ್ಕರ್, ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಇಲಾಖಾ ಸೋಮವಾರಪೇಟೆ ಉಪವಿಭಾಗ, ಇವರು ಹಾಲಿ ಸಹಾಯಕ ಇಂಜಿನಿಯರ್ ಆಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸೋಮವಾರಪೇಟೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು,** ಪ್ರಸ್ತುತ ಡಾಂಬರು ರಸ್ತೆ ಅನುಷ್ಠಾನದಲ್ಲಿ ಬಳಸಲಾದ WMM ಪರಿಮಾಣ, SDBC ಪರಿಮಾಣ ಹಾಗೂ Bitumen ಸಾಮಗ್ರಿ ಬಳಕೆಯ ವ್ಯತ್ಯಯದಿಂದಾಗಿ ಕಳಪೆ ಮಟ್ಟದ ರಸ್ತೆ ಕಾಮಗಾರಿಯಾಗಿ ನಿರ್ಮಾಣವಾಗಿ, ಇದರಿಂದ ಉಂಟಾಗಿರುವ ಕೊರತೆಯಲ್ಲಿ, KPWA Code Vol 1, Para No.209 (d), KPWD (D) Code, Vol 1, Para No.301 ರ ಮತ್ತು KPWD (D) Code Vol II, Appendix VII ರ ಪ್ರಕಾರ, **ಶೇಕಡ 37.5 ರಂತೆ, ರೂ. (7,45,539x 37.5/100) = ರೂ.2,79,577/-ಗಳ ಕೊರತೆ/ಲೋಪಕ್ಕೆ ಹೊಣೆಗಾರರಾಗಿರುತ್ತಾರೆ.**

**5.00** ಸದರಿ ಪ್ರಕರಣದ ಕುರಿತಾಗಿ ದಿನಾಂಕ 26/08/2015 ರಂದು ನಡೆಸಿದ ಸ್ಥಳ ತನಿಖೆಯ ಮಹಜರ್‌ನ ಮೂಲ ಪ್ರತಿ, ಗುಣಭರವಸೆ ಉಪವಿಭಾಗ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ಇಲ್ಲಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಸಲ್ಲಿಕೆಯಾದ ಪರೀಕ್ಷಾ ಫಲಿತಾಂಶಗಳ ವರದಿಯ ಮೂಲ ಪ್ರತಿ, ಪ್ರಯೋಗಾಲಯದ ಛಾಯಾಚಿತ್ರಗಳು, ಸ್ಥಳ ತನಿಖೆಯ ನಡವಳಿಗಳನ್ನು ಚಿತ್ರೀಕರಿಸಿರುವ 'ವಿಡಿಯೋ ಸಿಡಿ', ಛಾಯಾಚಿತ್ರಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ/ಸಂಗ್ರಹಿಸಿದ ಎಲ್ಲ ದೃಢೀಕೃತ ದಾಖಲೆಗಳನ್ನು ಕಡತದಲ್ಲಿ ಮಾಹಿತಿಗಾಗಿ ಇರಿಸಲಾಗಿದ್ದು, ಮೇಲೆ ವಿವರಿಸಿರುವ ಅಂಶಗಳ ಕುರಿತು ಮುಂದಿನ ಸೂಕ್ತ ಕ್ರಮ ಕೋರಿ ವರದಿಯನ್ನು ಸಲ್ಲಿಸಲಾಗಿದೆ."

18. ಈ ಮೇಲ್ಕಂಡ ರೀತಿಯಲ್ಲಿ ತನಿಖಾಧಿಕಾರಿಗಳು ಸದರಿ ಕಾಮಗಾರಿ ಕಳಪೆ ಕಾಮಗಾರಿಯಾಗಿದ್ದು ಸಾಮಗ್ರಿ ಬಳಕೆಯ ವ್ಯತ್ಯಯದಿಂದ ಈ ರೀತಿಯಾಗಿರುತ್ತದೆ ಎಂದು ಆ.ಸ.ನೌ.ರವರುಗಳ ಮೇಲೆ KPWA Code Vol 1, Para No.209 (d), KPWD (D) Code, Vol 1, Para No.301 ರ ಮತ್ತು KPWD (D) Code Vol II, Appendix VII ರ ಪ್ರಕಾರ ಆರ್ಥಿಕ ಹೊಣೆಯನ್ನು ಹೊರೆಸಿರುತ್ತಾರೆ.

19. ಮೇಲ್ಕಂಡ ತನಿಖಾಧಿಕಾರಿಯ ಸ್ಥಳ ತನಿಖೆ ಮತ್ತು ವರದಿಯ ಬಾಬ್ತು ಆ.ಸ.ನೌ.ರವರುಗಳ ಪ್ರತಿವಾದವೇನೆಂದರೆ, ಆ.ಸ.ನೌ-2 ರವರು ಈ ಕಾಮಗಾರಿ ನಡೆದ ಅವಧಿಯಲ್ಲಿ ತಾನು ಆ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿರುವುದೇ ಇಲ್ಲ. ತಪ್ಪು ಮಾಹಿತಿಯಿಂದಾಗಿ ತನಿಖಾಧಿಕಾರಿ ತನ್ನ ಹೆಸರನ್ನು ತಮ್ಮ ವರದಿಯಲ್ಲಿ ಸೇರಿಸಿರುತ್ತಾರೆ ಎನ್ನುವುದಾಗಿದೆ. ಇನ್ನು ಉಳಿದ ಆ.ಸ.ನೌ.ರವರುಗಳ ಪ್ರಕಾರ ತನಿಖಾಧಿಕಾರಿ Morth Specifications ರಂತೆ ತನಿಖೆ ನಡೆಸಿರುವುದೇ ಇಲ್ಲ. ತಪ್ಪು ವರದಿಯನ್ನು ನೀಡಿರುತ್ತಾರೆ ಎನ್ನುವುದಾಗಿದೆ. ಈ ಬಗ್ಗೆ ಆ.ಸ.ನೌ-1, 3 ಮತ್ತು 4 ರವರ ಪರ ವಕೀಲರು ತನಿಖಾಧಿಕಾರಿಯವರನ್ನು

ಪಾಟಿಸವಾಲುಗೊಳಿಸಿದ್ದು, ಪಾಟಿಸವಾಲಿನಲ್ಲಿ **"ನಾನು ಸ್ಯಾಂಪಲ್‌ನ್ನು ತೆಗೆಯುವಾಗ ಕೋರ್ ಕಟಿಂಗ್ ವಿಧಾನವನ್ನು ಅಳವಡಿಸಿರುವುದಿಲ್ಲ ಆದರೆ ಗುಂಡಿ ತೆಗೆಯುವ ಮೂಲಕ ಮಾಡಿರುತ್ತೇನೆ. Morth Specification ಪ್ರಕಾರ ಕೋರ್ ಕಟಿಂಗ್ ವಿಧಾನವನ್ನೇ ಅಳವಡಿಸಬೇಕು ಎನ್ನುವ ಬಗ್ಗೆ ನನಗೆ ಅರಿವಿರುವುದಿಲ್ಲ. ಬದಲಿಗೆ ನಾನು ಗುಣಭರವಸೆಯ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ಅಳವಡಿಸಿರುವ ವಿಧಾನವನ್ನು ಅವಲಂಭಿಸಿರುತ್ತೇನೆ. ಸ್ಥಳ ತನಿಖೆ ನಡೆಸುವಾಗ ವಿಡಿಯೋ ಚಿತ್ರೀಕರಣ ಮಾಡಲಾಗಿದೆ. ಸ್ಯಾಂಪಲ್ ತೆಗೆದು ಅದರ ಅಳತೆಯನ್ನು ತೆಗೆದುಕೊಂಡ ಬಾಬ್ತು ಚಿತ್ರೀಕರಣ ಇರುವುದಿಲ್ಲ ಎನ್ನುವುದು ಸರಿಯಲ್ಲ. WMM ಮತ್ತು SDBC ಗ್ರಾತವನ್ನು ಫೋಟೋಗಳಲ್ಲಾಗಲಿ, ವಿಡಿಯೋ ಚಿತ್ರೀಕರಣದಲ್ಲಗಾಲಿ ನಿರ್ಧಿಷ್ಟವಾಗಿ ದಾಖಲಿಸಿರುವುದನ್ನು ತೋರಿಸಿರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ ಹಾಜರುಪಡಿಸಲಾಗಿರುವ ಫೋಟೋಗಳಲ್ಲಿ ಕಂಡುಬಂದಿರುವುದಿಲ್ಲ ಎನ್ನುತ್ತಾರೆ"** ಎಂದು ನುಡಿದಿರುತ್ತಾರೆ. ತನಿಖಾಧಿಕಾರಿಯವರು ಗುಣಭರವಸೆಯ ಉಪವಿಭಾಗದ ಇಂಜಿನಿಯರ್‌ರವರು ಅಳವಡಿಸಿದ ವಿಧಾನದಿಂದ ಸ್ಯಾಂಪಲ್ ತೆಗೆದು ಅಳತೆ ಮಾಡಿರುತ್ತಾರೆ ಎನ್ನುವುದು ಕಂಡುಬರುತ್ತದೆ. ಅಲ್ಲದೇ, WMM ಮತ್ತು SDBC ಗ್ರಾತವನ್ನು ಫೋಟೋಗಳಲ್ಲಾಗಲಿ, ವಿಡಿಯೋ ಚಿತ್ರೀಕರಣದಲ್ಲಗಾಲಿ ನಿರ್ಧಿಷ್ಟವಾಗಿ ದಾಖಲಿಸಿರುವುದಿಲ್ಲ ಎನ್ನುವುದು ಆ.ಸ.ನೌ.ರವರುಗಳ ಪರ ಪಾಟಿಸವಾಲುಗೊಳಿಸಿದ ರಕ್ಷಣಾ ಸಹಾಯಕರ ವಾದವಾಗಿತ್ತು. ಆದರೆ, ತನಿಖೆಯ ಕಾಲಕ್ಕೆ ದಾಖಲಿಸಿದ ವಿಡಿಯೋ ಚಿತ್ರೀಕರಣವನ್ನು ಎಲ್ಲರ ಸಮಕ್ಷಮ ವೀಕ್ಷಿಸಿದಾಗ "ಗುಣಭರವಸೆ ಉಪವಿಭಾಗದವರು ತೆಗೆದ ಗುಂಡಿಯನ್ನು ಮೆಟಲ್ ಸ್ಕೇಲ್‌ನಲ್ಲಿ ಅಳತೆ ಮಾಡಿ ನೋಡಿದ್ದು, ಆಗ WMM 10 ಸೆ.ಮೀ. ಇದ್ದು, SDBC 25 ಮಿ.ಮೀ. ಇರುವುದು ಕಂಡುಬರುತ್ತಿತ್ತು. ವಿಡಿಯೋ ಚಿತ್ರೀಕರಣವನ್ನು ನೋಡಿದ ನಂತರ ರಕ್ಷಣಾ ಸಹಾಯಕರು ಈ ಬಾಬ್ತು ಮೌನವಹಿಸಿರುತ್ತಾರೆ.

20. ಅಲ್ಲದೇ, ತನಿಖಾಧಿಕಾರಿಯವರು ತಮ್ಮ ತನಿಖಾ ವರದಿ ನಿ.ಪಿ.17ರ ಪ್ಯಾರಾ 3.09 ಮತ್ತು 3.10, 3.11 ರಲ್ಲಿ ಈ ಕೆಳಕಂಡಂತೆ ಸ್ಪಷ್ಟವಾಗಿ WMM ಮತ್ತು SDBC ಯ ಪದರಗಳ ವಿವರಗಳನ್ನು ತಿಳಿಸಿರುತ್ತಾರೆ.

"3.09 ಆನಂತರ, ದೂರುದಾರರು ಸ್ಥಳದಲ್ಲಿ ತಿಳಿಸಿದಂತೆ, ಸದರಿ ರಸ್ತೆಯ ಚೈನೇಜ್ 6.590 ಕಿ.ಮೀ., ಹಾಗೂ 7.010 ಕಿ.ಮೀ., ನಲ್ಲಿ ಪರೀಕ್ಷಾ ಗುಂಡಿಗಳನ್ನು ತೆಗೆಯುವ ಮೂಲಕ ರಸ್ತೆಯಲ್ಲಿನ WMM ಮತ್ತು SDBC ಪದರಗಳ ವಿವರಗಳನ್ನು ಲೋಕೋಪಯೋಗಿ ಗುಣಭರವಸೆ ಉಪವಿಭಾಗ, ಮಂಗಳೂರು ಇಲ್ಲಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಸಹಾಯಕ ಇಂಜಿನಿಯರ್‌ರವರುಗಳ ನೆರವಿನೊಂದಿಗೆ ಪರಿಶೀಲಿಸಲಾಗಿದ್ದು, ಅವುಗಳ ದಪ್ಪದ ಮತ್ತು ಇತರೆ ಅಂಶದ ವಿವರಗಳನ್ನು ಅನುಬಂಧ-1 ರಲ್ಲಿಯೇ ದಾಖಲಿಸಿ ಮಹಜರ್‌ನ ಭಾಗವಾಗಿ ಅಳವಡಿಸಿದೆ. ಅದರ ವಿವರ ಕೆಳಕಂಡಂತಿದೆ.

**i) ಚೈನೇಜ್ 6.590 ಕಿ.ಮೀ.,**
**ಅ) Wet Mix Macadam (W.M.M) ದಪ್ಪ = 10.00 ಸೆಂ.ಮೀ.,**
**ಆ) Semidense Bituminous Concrete (SDBC) = 25 ಮಿ.ಮೀ.,**

**ii) ಚೈನೇಜ್ 7.010 ಕಿ.ಮೀ.,**
**ಅ) Wet Mix Macadam (WMM) ದಪ್ಪ = 10.00 ಸೆಂ.ಮೀ.,**
**ಆ) Semidense Bituminous Concrete (SDBC) ದಪ್ಪ = 23 ಮಿ.ಮೀ.,**

3.10 ಸ್ಥಳದಲ್ಲಿ ಗಮನಿಸಿದಂತೆ W.M.M ಗೆ ಬಳಸಿರುವ ಕಲ್ಲುಗಳ ಗಾತ್ರವು ನಿಗಧಿತ ಪ್ರಮಾಣದಲ್ಲಿರದೇ ಹೆಚ್ಚಿನ ಗಾತ್ರದ ಕಲ್ಲುಗಳಾಗಿರುವುದಾಗಿ ಶ್ರೀ ವೆಂಕಟೇಶ್ ನರಗುಂದ, ಸಹಾಯಕ ಇಂಜಿನಿಯರ್, ಗುಣಭರವಸೆ ಉಪವಿಭಾಗ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ಇವರು ಸ್ಥಳದಲ್ಲಿ ಅಭಿಪ್ರಾಯ ಮಂಡಿಸಿರುತ್ತಾರೆ.

3.11 ಸ್ಥಳದಲ್ಲಿ ಮೇಲೆ ತಿಳಿಸಿದಂತೆ ತೆಗೆದ ಪರೀಕ್ಷಾ ಗುಂಡಿಗಳಿಂದ ಡಾಂಬರಿನ ಮಿಶ್ರಣವನ್ನು ಸಂಗ್ರಹಿಸಿ, ಅವುಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಶೇಖರಿಸಿ, ಸೀಲ್ ಮಾಡಿ, ಈ ಮಾದರಿಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷಿಸಿ ಡಾಂಬರಿನ ಅಂಶವನ್ನು ಲೆಕ್ಕ ಮಾಡಿ ಫಲಿತಾಂಶದ ವರದಿಯನ್ನು ಸಲ್ಲಿಸಲು ತಿಳಿಸಿ,

ಅವುಗಳನ್ನು ಗುಣಭರವಸೆ ಉಪವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಹಸ್ತಾಂತರಿಸಲಾಯಿತು".

21. ಮೇಲ್ಕಂಡ ರೀತಿಯಲ್ಲಿ ತನಿಖಾಧಿಕಾರಿಯವರು WMM ಮತ್ತು SDBC ಯ ಪದರಗಳ ಅಳತೆಯನ್ನು ಉಲ್ಲೇಖಿಸಿರುತ್ತಾರೆ. ಅಲ್ಲದೇ, ಮುಂದುವರೆದ ಪಾಟಿಸವಾಲಿನಲ್ಲಿ ತನಿಖಾಧಿಕಾರಿಯವರು ಸ್ಪಷ್ಟವಾಗಿ **"ತೆಗೆದಂತಹ ಎರಡು ಪರೀಕ್ಷಾಗುಂಡಿಗಳನ್ನು ಎಂ.ಬಿ. ಪುಸ್ತಕದಲ್ಲಿ ದಾಖಲಿಸಿದ ಅಳತೆಗೆ ಅನುಗುಣವಾಗಿ ತುಲನೆ ಮಾಡಿರುತ್ತೇನೆ. ಅಂದರೆ ಆ ರಸ್ತೆಯ ನಿರ್ಮಾಣದ ಹಂತದಲ್ಲಿನ ಕಾಮಗಾರಿಯ ವ್ಯತ್ಯಯವನ್ನು ಲೆಕ್ಕಮಾಡಿರುತ್ತೇನೆ................ ನಾನು ಪರೀಕ್ಷೆಗಳನ್ನು ಮಾಡುವಾಗ Morth Specification Table 900.3 & 900.4 ರಂತೆ ಮಾಡಬೇಕಾಗಿತ್ತು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತ: ನುಡಿಯುತ್ತಾರೆ ಆ ಪರೀಕ್ಷೆಗಳನ್ನು ರಸ್ತೆಯ ನಿರ್ಮಾಣದ ಹಂತದಲ್ಲಿ ಮಾಡಬೇಕಾಗಿರುತ್ತದೆ ಎಂದು"** ನುಡಿದಿರುತ್ತಾರೆ. ತನಿಖಾಧಿಕಾರಿಯವರು ಪಾಟಿಸವಾಲಿನಲ್ಲಿ ನೀಡಿರುವ ಸ್ಪಷ್ಟೀಕರಣವನ್ನು ಅವಲೋಕಿಸಲಾಗಿ, ಸೂಕ್ತ ರೀತಿಯಲ್ಲಿ ತನಿಖೆಯನ್ನು ಕೈಗೊಂಡು **"ಸ್ಥಳ ಪರಿಶೀಲನೆ ಹಾಗೂ ಗುಣಭರವಸೆ ಪರೀಕ್ಷೆಯಿಂದ ಲಭ್ಯವಾದ ಫಲಿತಾಂಶದ ಆಧಾರದ ಮೇರೆಗೆ, ಸದರಿ ಡಾಂಬರು ರಸ್ತೆಯ ಮೇಲ್ಮೈ ಉಬ್ಬು ತಗ್ಗುಗಳಿಂದ ಕೂಡಿದ್ದು, ಅಲ್ಲಲ್ಲಿ ಹಳ್ಳಗಳಿದ್ದು, ಜಲ್ಲಿ ಕಾಣಿಸುತ್ತಿದ್ದು, patch work ಮಾಡಿರುವುದು ತನಿಖೆಯಲ್ಲಿ ಕಂಡು ಬಂದಿರುವುದಲ್ಲದೇ, ಡಾಂಬರು ರಸ್ತೆಯಲ್ಲಿ ಬಳಸಲಾದ WMM ಪರಿಮಾಣ, SDBC ಪರಿಮಾಣ ಹಾಗೂ Bitumen Content ನ ಬಳಕೆಯ ಪರಿಮಾಣದಲ್ಲಿ ಮಂಜೂರಾದ ಅಂದಾಜು/ಅಳತೆ ಪುಸ್ತಕದಲ್ಲಿ ನಮೂದಿಸಿರುವ ವಿಶಿಷ್ಟ ವಿವರಣೆಯಲ್ಲಿನ ವಿವರಗಳಿಗೆ ಅನುಗುಣವಾಗಿ ಇರದೇ, ಸಾಮಗ್ರಿ/ಐಟಂಗಳ ಅನುಷ್ಠಾನದಲ್ಲಿ ಕೊರತೆ ಕಂಡು ಬಂದಿರುತ್ತದೆ"** ಎನ್ನುವ ಅಭಿಪ್ರಾಯಕ್ಕೆ ಬಂದಿರುತ್ತಾರೆ. ಅಲ್ಲದೇ, ಈ ಕೊರತೆಯ ಆರ್ಥಿಕ ಪ್ರಮಾಣವು ರೂ.7,45,539/- ಗಳಾಗಿದ್ದು, ಆ.ಸ.ನೌ.ರವರುಗಳು ಜವಾಬ್ದಾರರಾಗಿರುತ್ತಾರೆ ಎಂದೂ ಸಹ ಲೆಕ್ಕ ಹಾಕಿರುತ್ತಾರೆ. ಆದರೆ, ಈ ಪ್ರಕರಣದಲ್ಲಿ ಪ್ರಮುಖವಾಗಿ ಆ.ಸ.ನೌ-2 ಶ್ರೀ. ರಾಮಕೃಷ್ಣ ರವರು ತಾನು ಈ ಕಾಮಗಾರಿ ನಡೆದಂತಹ ಸಂದರ್ಭದಲ್ಲಿ ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ ಹಾಗೂ

ಈ ಕಾಮಗಾರಿಗೆ ಸಂಬಂಧಪಟ್ಟಂತೆ ತಾನು ಯಾವುದೇ ಕೆಲಸವನ್ನು ನಿರ್ವಹಿಸಿರುವುದಿಲ್ಲ ಎನ್ನುವ ಸ್ಪಷ್ಟ ಪ್ರತಿವಾದವನ್ನು ತೆಗೆದುಕೊಂಡಿರುತ್ತಾರೆ. ಅಲ್ಲದೇ, ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷ್ಯ ವಿಚಾರಣೆ ಮಾಡಿಕೊಂಡು, ಮುಖ್ಯ ವಿಚಾರಣೆಯಲ್ಲಿ "1997 ರಿಂದ 2002ರವರೆಗೆ ಸಹಾಯಕ ಅಭಿಯಂತರನಾಗಿ ಸೋಮವಾರಪೇಟೆ ಉಪವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಈ ಪ್ರಸ್ತುತ ಕಾಮಗಾರಿಗಳು ಡಿಸೆಂಬರ್ 2012ರಿಂದ ಜನವರಿ 2013ರವರೆಗೂ ನಡೆದಿವೆ. ಈ ಅವಧಿಯಲ್ಲಿ ನಾನು ಆ ಕಚೇರಿಯಲ್ಲಿ ಕಾರ್ಯನಿರ್ವಹಿಸಿರುವುದಿಲ್ಲ. ಈ ಬಾಬ್ತು ನಾನು ನನ್ನ ಪ್ರಭಾರ ವರ್ಗಾವಣೆ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದೇನೆ" ಎಂದು ನುಡಿದಿರುತ್ತಾರೆ. ಸದರಿಯವರ ಪ್ರಭಾರ ವರ್ಗಾವಣೆ ಪ್ರಮಾಣ ಪತ್ರವನ್ನು ನಿ.ಡಿ.6 ಎಂತಲೂ, ಕಾರ್ಯಪಾಲಕ ಇಂಜಿನಿಯರ್, ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು ರವರು ನೀಡಿರುವ ದೃಢೀಕರಣ ಪತ್ರವನ್ನು ನಿ.ಡಿ.7 ಎಂತಲೂ ಗುರುತುಪಡಿಸಿಕೊಳ್ಳಲಾಗಿದೆ. ಈ ನಿ.ಡಿ.6 ಮತ್ತು 7 ಗಳನ್ನು ಅವಲೋಕಿಸಲಾಗಿ, ಆ.ಸ.ನೌ–2 ರವರು ದಿನಾಂಕ: 06/12/2012 ರಿಂದ 31/05/2016 ರವರೆಗೆ ಕಾರ್ಯಪಾಲಕ ಇಂಜಿನಿಯರ್ (ನಿ), ನಂ.2, ವರುಣ ನಾಲಾ ನಿರ್ಮಾಣ ವಿಭಾಗ, ಮೈಸೂರು ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದುದು ಕಂಡು ಬರುತ್ತದೆ. ಈ ಬಗ್ಗೆ ತನಿಖಾಧಿಕಾರಿಯವರು ತಮ್ಮ ಪಾಟಿಸವಾಲಿನಲ್ಲಿ **"2012–13ನೇ ಸಾಲಿನಲ್ಲಿ ಸದರಿ ರಸ್ತೆಯ ಕಾಮಗಾರಿಯನ್ನು ಕೈಗೊಳ್ಳಲಾಗಿತ್ತು ಎಂದರೆ ಸರಿ. ದಿನಾಂಕ: 21/12/2012 ರಂದು ಡಬ್ಲ್ಯೂಎಂಎಂ ಪದರದ ಕಾಮಗಾರಿ ಅಳತೆಯನ್ನು ಎಂ.ಬಿ ಪುಸ್ತಕದಲ್ಲಿ ದಾಖಲಿಸಿದ್ದು, ಅದೇ ರೀತಿ ಎಸ್‌ಡಿಬಿಸಿ ಪದರದ ಕಾಮಗಾರಿ ಅಳತೆಯನ್ನು ದಿನಾಂಕ: 26/01/2013 ರಂದು ಎಂ.ಬಿ ಪುಸ್ತಕದಲ್ಲಿ ದಾಖಲಿಸಿದ್ದು, ದಿನಾಂಕ: 28/01/2013 ರಂದು ಚೆಕ್ ಅಳತೆ ಆಗಿದೆ ಎಂದರೆ ಸರಿ. ದಿನಾಂಕ: 25/05/2012 ರಂದು 2ನೇ ಆ.ಸ.ನೌ.ರರಿಗೆ ವರ್ಗಾವಣೆ ಆದೇಶ ಬಂದಿದ್ದು ದಿನಾಂಕ: 01/06/2012 ರಂದು 2ನೇ ಆ.ಸ.ನೌ.ರರು ಸಿಟಿಸಿ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ರಸ್ತೆ ಕಾಮಗಾರಿ ಕಾಲದಲ್ಲಿ 2ನೇ ಆ.ಸ.ನೌ.ರರು ಕರ್ತವ್ಯದಲ್ಲಿ ಇಲ್ಲದೆ ಇದ್ದರೂ ಸಹ ನಿ.ಪಿ.17 ತನಿಖಾ ವರದಿಯಲ್ಲಿ 2ನೇ ಆ.ಸ.ನೌ.ರರ ಹೆಸರನ್ನು ಉದ್ದೇಶಪೂರ್ವಕವಾಗಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ರಸ್ತೆ ಕಾಮಗಾರಿಗೆ ಸಂಬಂಧಪಟ್ಟಂತೆ ಎಂ.ಬಿ ಪುಸ್ತಕ ಮತ್ತು ಬಿಲ್‌ನಲ್ಲಿ 2ನೇ ಆ.ಸ.ನೌ.ರರ ಸಹಿ ಇಲ್ಲ ಎಂದು ನನಗೆ ಗೊತ್ತಿಲ್ಲ. ಒಂದು ಬಿಲ್‌ನಲ್ಲಿ ಏಕಕಾಲದಲ್ಲಿ ಇಬ್ಬರು**

**ಎಇಇಗಳು ಸಹಿ ಮಾಡಲು ಬರುವುದಿಲ್ಲ ಎಂದರೆ ಸರಿ. 2ನೇ ಆ.ಸ.ನೌ.ರರ ಹೊಣೆಗಾರಿಗೆ ಮತ್ತು ಜವಾಬ್ದಾರಿ ಇಲ್ಲ ಎಂತೆ ಸರಿಯಲ್ಲ. ದಿನಾಂಕ: 01/06/2012 ರಂದು 2ನೇ ಆ.ಸ.ನೌ.ರರು ಕಾವೇರಿ ನೀರಾವರಿ ನಿಗಮ, ವರುಣ ನಾಲಾ ವಿಭಾಗ, ಮೈಸೂರಿನಲ್ಲಿ ಕರ್ತವ್ಯಕ್ಕೆ ಹಾಜರು ಆಗಿದ್ದಾರೆ ಎಂದು ನನಗೆ ಗೊತ್ತಿಲ್ಲ"** ಎಂದು ನುಡಿದಿರುತ್ತಾರೆ. ದಾಖಲಾತಿಗಳ ಪ್ರಕಾರ ದಿನಾಂಕ: 06/12/2012 ರಿಂದ ಆ.ಸ.ನೌ–2 ರವರು ವರುಣ ನಾಲಾ ವಿಭಾಗ, ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ದಿನಾಂಕ: 28/01/2013 ರಂದು ಚೆಕ್ ಮೆಷರ್‌ಮೆಂಟ್ ಮುಗಿದಿರುತ್ತದೆ ಎನ್ನುವುದನ್ನು ತನಿಖಾಧಿಕಾರಿಯವರು ಒಪ್ಪಿರುತ್ತಾರೆ. ಅಲ್ಲದೇ, ದಿನಾಂಕ: 21/12/2012 ರಂದು ಡಬ್ಲ್ಯೂಎಂಎಂ ಪದರದ ಕಾಮಗಾರಿ ಅಳತೆಯನ್ನು ಎಂ.ಬಿ ಪುಸ್ತಕದಲ್ಲಿ ದಾಖಲಿಸಿದ್ದು, ಅದೇ ರೀತಿ ಎಸ್‌ಡಿಬಿಸಿ ಪದರದ ಕಾಮಗಾರಿ ಅಳತೆಯನ್ನು ದಿನಾಂಕ: 26/01/2013 ರಂದು ಎಂ.ಬಿ ಪುಸ್ತಕದಲ್ಲಿ ದಾಖಲಿಸಿದ್ದು, ದಿನಾಂಕ: 28/01/2013 ರಂದು ಚೆಕ್ ಅಳತೆ ಆಗಿದೆ ಎನ್ನುವುದನ್ನು ತನಿಖಾಧಿಕಾರಿಯವರು ತಮ್ಮ ಪಾಟಿಸವಾಲಿನಲ್ಲಿ ಒಪ್ಪಿರುತ್ತಾರೆ. ಹೀಗಿರುವಾಗ, ಅವರ ಮೇಲೆ ಆರ್ಥಿಕ ಹೊಣೆಯನ್ನು ಹೊರಿಸಲು ಬರುವುದಿಲ್ಲ ಎನ್ನುವ ವಾದವನ್ನು ಒಪ್ಪಬೇಕಾಗುತ್ತದೆ. ದಾಖಲಾತಿಗಳನ್ನು ಪರಿಶೀಲಿಸಲಾಗಿ, ಈ ಕಾಮಗಾರಿ ನಡೆದಂತಹ ಸಂದರ್ಭದಲ್ಲಿ ಆ.ಸ.ನೌ–1 ಶ್ರೀ. ದೊಡ್ಡಸಿದ್ದಯ್ಯ, ಕಾರ್ಯಪಾಲಕ ಇಂಜಿನಿಯರ್, ಆ.ಸ.ನೌ–3 ಶ್ರೀ. ಟಿ.ಹೆಚ್ ಲಿಂಗರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಆ.ಸ.ನೌ–4 ಶ್ರೀ. ಬಿ.ಜಿ ಭಾಸ್ಕರ್, ಸಹಾಯಕ ಇಂಜಿನಿಯರ್ ರವರುಗಳು ಮಾತ್ರವೇ ಕರ್ತವ್ಯ ನಿರ್ವಹಿಸಿರುತ್ತಾರೆ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ.

22. ತನಿಖಾಧಿಕಾರಿಯವರ ವರದಿಯಂತೆ:

(ಅ) **ಆ.ಸ.ನೌ–1 ಶ್ರೀ ದೊಡ್ಡಸಿದ್ದಯ್ಯ, ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ ಇವರು ಹಾಲಿ ಕಾರ್ಯಪಾಲಕ ಇಂಜಿನಿಯರ್ ಆಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು,** ಪ್ರಸ್ತುತ ಡಾಂಬರು ರಸ್ತೆ ಅನುಷ್ಠಾನದಲ್ಲಿ ಬಳಸಲಾದ WMM ಪರಿಮಾಣ, SDBC ಪರಿಮಾಣ ಹಾಗೂ Bitumen ಸಾಮಗ್ರಿ ಬಳಕೆಯ ವ್ಯತ್ಯಯದಿಂದಾಗಿ

ಕಳಪೆ ಮಟ್ಟದ ರಸ್ತೆ ಕಾಮಗಾರಿಯಾಗಿ ನಿರ್ಮಾಣವಾಗಿ, ಇದರಿಂದ ಉಂಟಾಗಿರುವ ಕೊರತೆಯಲ್ಲಿ, KPWA Code Vol 1, Para No.209 (d), KPWD (D) Code, Vol 1, Para No.301 ರ ಮತ್ತು KPWD (D) Code Vol II, Appendix VII ರ ಪ್ರಕಾರ, **ಶೇಕಡ 25 ರಂತೆ, ರೂ. (7,45,539 x 25/100) = ರೂ.1,86,384/-ಗಳ ಕೊರತೆ/ಲೋಪಕ್ಕೆ ಹೊಣೆಗಾರರಾಗಿರುತ್ತಾರೆ.**

(ಆ) ಆ.ಸ.ನೌ-2 **ಶ್ರೀ ರಾಮಕೃಷ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಸೋಮವಾರಪೇಟೆ ಉಪವಿಭಾಗ ಇವರು ಹಾಲಿ ಕಾರ್ಯಪಾಲಕ ಇಂಜಿನಿಯರ್ ಆಗಿ ವರುಣಾ ನಾಲಾ ವಿಭಾಗ, ಮೈಸೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು,** ಪ್ರಸ್ತುತ ಡಾಂಬರು ರಸ್ತೆ ಅನುಷ್ಠಾನದಲ್ಲಿ ಬಳಸಲಾದ WMM ಪರಿಮಾಣ, SDBC ಪರಿಮಾಣ ಹಾಗೂ Bitumen ಸಾಮಗ್ರಿ ಬಳಕೆಯ ವ್ಯತ್ಯಯದಿಂದಾಗಿ ಕಳಪೆ ಮಟ್ಟದ ರಸ್ತೆ ಕಾಮಗಾರಿಯಾಗಿ ನಿರ್ಮಾಣವಾಗಿ, ಇದರಿಂದ ಉಂಟಾಗಿರುವ ಕೊರತೆಯಲ್ಲಿ, KPWA Code Vol 1, Para No.209 (d), KPWD (D) Code, Vol 1, Para No.301 ರ ಮತ್ತು KPWD (D) Code Vol II, Appendix VII ರ ಪ್ರಕಾರ, **ಶೇಕಡ 37.5 ರಂತೆ, (ಮತ್ತೊಬ್ಬ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರೂ ಭಾಗಿಯಾಗಿರುವುದರಿಂದ ಶೇ.37.5/2 ರಂತೆ) ರೂ. (7,45,539 x 37.5/2 x 100) = ರೂ.1,39,789/-ಗಳ ಕೊರತೆ/ಲೋಪಕ್ಕೆ ಹೊಣೆಗಾರರಾಗಿರುತ್ತಾರೆ.**

(ಇ) ಆ.ಸ.ನೌ-3 **ಶ್ರೀ ಟಿ.ಹೆಚ್. ಲಿಂಗರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖಾ ಸೋಮವಾರಪೇಟೆ ಉಪವಿಭಾಗ ಇವರು ದಿನಾಂಕ 31/03/2015ರಂದು ಸರ್ಕಾರಿ ಸೇವೆಯಿಂದ ನಿವೃತ್ತಿಯಾಗಿ, ನಂ.1, ಬ್ಲಾಕ್ ನಂ. 12, ಮಧುವನ ಬಡಾವಣೆ, ಶ್ರೀರಾಮಪುರ-2 ಸ್ಟೇಜ್, ಮೈಸೂರು – 570023 ನಿವಾಸದಲ್ಲಿ ವಾಸಿಸುತ್ತಿದ್ದು,** ಪ್ರಸ್ತುತ ಡಾಂಬರು ರಸ್ತೆ ಅನುಷ್ಠಾನದಲ್ಲಿ ಬಳಸಲಾದ WMM ಪರಿಮಾಣ, SDBC ಪರಿಮಾಣ ಹಾಗೂ Bitumen ಸಾಮಗ್ರಿ ಬಳಕೆಯ ವ್ಯತ್ಯಯದಿಂದಾಗಿ ಕಳಪೆ ಮಟ್ಟದ ರಸ್ತೆ ಕಾಮಗಾರಿಯಾಗಿ ನಿರ್ಮಾಣವಾಗಿ, ಇದರಿಂದ ಉಂಟಾಗಿರುವ ಕೊರತೆಯಲ್ಲಿ, KPWA

Code Vol 1, Para No.209 (d), KPWD (D) Code, Vol 1, Para No.301 ರ ಮತ್ತು KPWD (D) Code Vol II, Appendix VII ರ ಪ್ರಕಾರ, **ಶೇಕಡ 37.5 ರಂತೆ, (ಮತ್ತೊಬ್ಬ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರೂ ಭಾಗಿಯಾಗಿರುವುದರಿಂದ ಶೇ.37.5/2 ರಂತೆ) ರೂ. (7,45,539 x 37.5/2 x 100) = ರೂ.1,39,789/-ಗಳ ಕೊರತೆ/ಲೋಪಕ್ಕೆ ಹೊಣೆಗಾರರಾಗಿರುತ್ತಾರೆ.**

(ಈ) **ಆ.ಸ.ನೌ-4 ಶ್ರೀ ಬಿ.ಜಿ. ಭಾಸ್ಕರ್, ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಇಲಾಖಾ ಸೋಮವಾರಪೇಟೆ ಉಪವಿಭಾಗ, ಇವರು ಹಾಲಿ ಸಹಾಯಕ ಇಂಜಿನಿಯರ್ ಆಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸೋಮವಾರಪೇಟೆ ಇಲ್ಲಿ ಕರ್ತವ್ಯ** ನಿರ್ವಹಿಸುತ್ತಿದ್ದು, ಪ್ರಸ್ತುತ ಡಾಂಬರು ರಸ್ತೆ ಅನುಷ್ಠಾನದಲ್ಲಿ ಬಳಸಲಾದ WMM ಪರಿಮಾಣ, SDBC ಪರಿಮಾಣ ಹಾಗೂ Bitumen ಸಾಮಗ್ರಿ ಬಳಕೆಯ ವ್ಯತ್ಯಯದಿಂದಾಗಿ ಕಳಪೆ ಮಟ್ಟದ ರಸ್ತೆ ಕಾಮಗಾರಿಯಾಗಿ ನಿರ್ಮಾಣವಾಗಿ, ಇದರಿಂದ ಉಂಟಾಗಿರುವ ಕೊರತೆಯಲ್ಲಿ, KPWA Code Vol 1, Para No.209 (d), KPWD (D) Code, Vol 1, Para No.301 ರ ಮತ್ತು KPWD (D) Code Vol II, Appendix VII ರ ಪ್ರಕಾರ, **ಶೇಕಡ 37.5 ರಂತೆ, ರೂ. (7,45,539x 37.5/100) = ರೂ.2,79,577/-ಗಳ ಕೊರತೆ/ಲೋಪಕ್ಕೆ ಹೊಣೆಗಾರರಾಗಿರುತ್ತಾರೆ** ಎಂದು ಆರ್ಥಿಕ ಹೊಣೆಯನ್ನು ಹೊರೆಸಿರುತ್ತಾರೆ.

23. ಆದರೆ, **ಆ.ಸ.ನೌ-2 ಶ್ರೀ. ರಾಮಕೃಷ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು** ಸದರಿ ಕಾಮಗಾರಿ ನಡೆದಂತಹ ಸಂದರ್ಭದಲ್ಲಿ ಅಲ್ಲಿ ಕರ್ತವ್ಯವನ್ನು ನಿರ್ವಹಿಸಿರದೇ ಇರುವುದರಿಂದ ಮತ್ತು ಆ ಸಮಯದಲ್ಲಿ **ಆ.ಸ.ನೌ-3 ಶ್ರೀ. ಟಿ.ಹೆಚ್ ಲಿಂಗರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು** ಮಾತ್ರವೇ ಕರ್ತವ್ಯ ನಿರ್ವಹಿಸುತ್ತಿದ್ದುದರಿಂದ, ತನಿಖಾಧಿಕಾರಿಯವರು **ಆ.ಸ.ನೌ-2 ಶ್ರೀ. ರಾಮಕೃಷ್ಣ ರವರ ಮೇಲೆ ಲೆಕ್ಕ ಹಾಕಿರುವ ಆರ್ಥಿಕ ಹೊಣೆ ರೂ.1,39,789/-ಕ್ಕೆ ಆ.ಸ.ನೌ-3 ಶ್ರೀ ಟಿ.ಹೆಚ್. ಲಿಂಗರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಹೊಣೆಗಾರರಾಗಿರುತ್ತಾರೆ.**

24. ಇಲ್ಲಿ ಆ.ಸ.ನೌ–1 ರಿಂದ 4 ರವರ ಪರ ಹಾಜರಾದಂತಹ ವಕೀಲರ ವಾದವೇನೆಂದರೆ, ತನಿಖಾಧಿಕಾರಿಯವರು ಲೆಕ್ಕ ಹಾಕಿರುವ ರೀತಿಯಲ್ಲಿ ಆರ್ಥಿಕ ಹೊಣೆಯನ್ನು ಲೆಕ್ಕ ಹಾಕಲು ಮತ್ತು ಆ.ಸ.ನೌ.ರವರುಗಳನ್ನು ಹೊಣೆಗಾರರನ್ನಾಗಿ ಮಾಡಲು ಬರುವುದೇ ಇಲ್ಲ ಎನ್ನುವುದಾಗಿದೆ. ಈ ಬಗ್ಗೆ ಅವರು ತನಿಖಾಧಿಕಾರಿಯವರನ್ನು ಪಾಟಿಸವಾಲುಗೊಳಿಸಿದಾಗ **"KPWA Code Vol 1, Para No.209(d) KPWD (D) Code, Vol 1, Para No.301, ರ ಮತ್ತು KPWD (D)Code Vol II, Appendix VII ರ ಪ್ರಕಾರ ಆರ್ಥಿಕ ವಿಭಜನೆ ಮತ್ತು ಆರ್ಥಿಕ ಹೊಣೆಯನ್ನು ಹೊರೆಸುವ ಬಗ್ಗೆ ನಿರ್ಧಿಷ್ಟವಾಗಿ ಸೂಚಿಸಿಲ್ಲ ಎನ್ನುವುದು ಸರಿ. ಸಾಕ್ಷಿ ಸ್ವತ: ನುಡಿಯುತ್ತಾರೆ ಈ ಸಂಹಿತೆ ಪ್ರಕಾರ ಕಾಮಗಾರಿಯನ್ನು ಕೈಗೊಂಡ ಸಂದರ್ಭದಲ್ಲಿ ಅಳತೆಗಳನ್ನು ಕಾರ್ಯಪಾಲಕ ಇಂಜಿನಿಯರ್‌ರವರು ಶೇ.25ಪ್ರಮಾಣದಲ್ಲಿ ಹಾಗೂ ಉಳಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ ಸಹಾಯಕ ಇಂಜಿನಿಯರ್‌ರವರುಗಳು ಶೇ.100ರ ಪ್ರಮಾಣದಲ್ಲಿ ಪರಿಶೀಲಿಸಬೇಕು ಎಂದು ಇದ್ದು, ಈ ಆಧಾರದಲ್ಲಿ ಆರ್ಥಿಕ ಹೊರೆಯ ಪ್ರಮಾಣವನ್ನು ನಾನು ನನ್ನ ವರದಿಯಲ್ಲಿ ಅಧಿಕಾರಿಗಳ ವಿರುದ್ಧ ವಿಭಜಿಸಿ ಸೂಚಿಸಿರುತ್ತೇನೆ"** ಎಂದು ನುಡಿದಿರುತ್ತಾರೆ. ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಆರ್ಥಿಕ ಹೊಣೆಯನ್ನು ಕಾಮಗಾರಿಯನ್ನು ಕೈಗೊಂಡ ಸಂದರ್ಭದಲ್ಲಿ ಅಳತೆಗಳನ್ನು ಮಾಡಿದ ಇಂಜಿನಿಯರ್‌ರವರ ಕಾರ್ಯಕ್ಕೆ ಅನುಗುಣವಾಗಿ KPWA Code Vol 1, Para No.209(d) KPWD (D) Code, Vol 1, Para No.301, ರ ಮತ್ತು KPWD (D)Code Vol II, Appendix VII ರಂತೆ ಲೆಕ್ಕ ಹಾಕುವುದರಿಂದ, ತನಿಖಾಧಿಕಾರಿಯವರು ಆ ಪ್ರಕಾರ ಆರ್ಥಿಕ ವಿಭಜನೆ ಮತ್ತು ಆರ್ಥಿಕ ಹೊಣೆಯನ್ನು ನಿರ್ಧರಿಸಿರುತ್ತಾರೆ. ಈ ನಿಟ್ಟಿನಲ್ಲಿಯೂ, ತನಿಖಾಧಿಕಾರಿಯವರ ತನಿಖೆಯಲ್ಲಿ ಯಾವುದೇ ಲೋಪ ಉಂಟಾಗಿರುವುದಿಲ್ಲ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ.

25. **ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ–1 ರಿಂದ 4 ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ಆ.ಸ.ನೌ–1, 3 ಮತ್ತು 4 ರವರ ವಿರುದ್ಧ ಮಾತ್ರವೇ ರುಜುವಾತುಪಡಿಸಿದ್ದು, ಆ.ಸ.ನೌ–2 ರವರ ವಿರುದ್ಧ ರುಜುವಾತುಪಡಿಸಲು**

ವಿಫಲವಾಗಿರುತ್ತದೆ ಎಂದು ನಿರ್ಣಯಕ್ಕೆ ಬಂದು ಅಂಶ–1ನ್ನು ಆ.ಸ.ನೌ–1, 3 ಮತ್ತು 4 ರವರ ವಿರುದ್ಧ ಸಕಾರಾತ್ಮಕವಾಗಿಯೂ ಮತ್ತು ಆ.ಸ.ನೌ–2 ರವರ ವಿರುದ್ಧ ನಕಾರಾತ್ಮಕವಾಗಿಯೂ ಉತ್ತರಿಸಿರುತ್ತೇನೆ.

26. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.**

## ಆದೇಶ

ಶಿಸ್ತು ಪ್ರಾಧಿಕಾರದವರು ಆಪಾದಿತ ಆ.ಸ.ನೌ – (1) ಶ್ರೀ. **ದೊಡ್ಡಸಿದ್ದಯ್ಯ,** ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕೊಡಗು ವಿಭಾಗ, ಮಡಿಕೇರಿ ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಇ ವಿಭಾಗ, ಚಾಮರಾಜನಗರ (2) ಶ್ರೀ. **ರಾಮಕೃಷ್ಣ,** ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಸೋಮವಾರಪೇಟೆ ಉಪ ವಿಭಾಗ, ಮಡಿಕೇರಿ (ನಿವೃತ್ತ) (3) ಶ್ರೀ. **ಟಿ.ಹೆಚ್ ಲಿಂಗರಾಜು,** ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಸೋಮವಾರಪೇಟೆ ಉಪ ವಿಭಾಗ, ಮಡಿಕೇರಿ (ನಿವೃತ್ತ) ಮತ್ತು (4) ಶ್ರೀ. **ಬಿ.ಜಿ ಭಾಸ್ಕರ್,** ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಸೋಮವಾರಪೇಟೆ ಉಪ ವಿಭಾಗ, ಮಡಿಕೇರಿ ಪ್ರಸ್ತುತ ಸಹಾಯಕ ಇಂಜಿನಿಯರ್, ಪಿ.ಆರ್.ಇ ಉಪ ವಿಭಾಗ, ಸೋಮವಾರಪೇಟೆ ಇವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ಶಿಸ್ತುಪ್ರಾಧಿಕಾರವು **ಆ.ಸ.ನೌ–1, 3 ಮತ್ತು 4 ರವರ ವಿರುದ್ಧ ಮಾತ್ರ**

ರುಜುವಾತುಪಡಿಸಿದ್ದು ಮತ್ತು ಆ.ಸ.ನೌ–2 ರವರ ವಿರುದ್ಧ ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

ಪ್ರಕರಣದ ಆಪಾದಿತ ಕಾಮಗಾರಿಗೆ ಸಂಬಂಧಪಟ್ಟಂತೆ ಸಾಮಗ್ರಿಗಳ ಅನುಷ್ಠಾನದಲ್ಲಿ ಕೊರತೆ ಕಂಡುಬಂದಿದ್ದು, ಸದರಿ ಕೊರತೆಯ ಆರ್ಥಿಕ ಪ್ರಮಾಣ ಒಟ್ಟು ರೂ.7,45,539/–ಗಳಾಗಿರುತ್ತದೆ.

- ಆ.ಸ.ನೌ–1 ಶ್ರೀ. ದೊಡ್ಡಸಿದ್ದಯ್ಯ ರವರು ಶೇ.25 ರಂತೆ ಒಟ್ಟು ರೂ.1,86,384/– ಕೊರತೆ/ಲೋಪಕ್ಕೆ ಹೊಣೆಗಾರರಾಗಿರುತ್ತಾರೆ.
- ಆ.ಸ.ನೌ–3 ಶ್ರೀ. ಟಿ.ಹೆಚ್ ಲಿಂಗರಾಜು ರವರು ಶೇ.37.5/2 ರಂತೆ ಒಟ್ಟು ರೂ.2,79,578/– ಕೊರತೆ/ಲೋಪಕ್ಕೆ ಹೊಣೆಗಾರರಾಗಿರುತ್ತಾರೆ.
- ಆ.ಸ.ನೌ–4 ಶ್ರೀ. ಬಿ.ಜಿ ಭಾಸ್ಕರ್ ರವರು ಶೇ.37.5 ರಂತೆ ಒಟ್ಟು ರೂ.2,79,577/– ಕೊರತೆ/ಲೋಪಕ್ಕೆ ಹೊಣೆಗಾರರಾಗಿರುತ್ತಾರೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

22/2/21

(ಕೆ.ಭಾಗ್ಯ)
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ANNEXURES**

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. H.M Prakash S/o Late Sri. Mandanna, Haraga Village, Somvarpet Taluk. |
| | **PW-2** | Sri. S Srikanth S/o P Singraiah, Technical Assistant Bridges, C.E Office, Bengaluru. |
| 2 | **Documents marked on behalf of the Disciplinary Authority Ex.P-1 to Ex.P-17** | |
| | **Ex.P.1 & 1(a)** | Complaint given by the complainant to this institution with Signature dtd: 18/03/2014. |
| | **Ex.P.2 & 2(a)** | Form No.1 with Signature. |
| | **Ex.P.3 & 3(a)** | Form No.2 with Signature (Affidavit). |
| | **Ex.P.4** | Measurement Book. |
| | **Ex.P.5** | Photographs. |
| | **Ex.P.6** | Spot mahazar. |
| | **Ex.P.7** | Letter dtd: 12/08/2015 addressed to AEE, PWD, No.2, Sub-Division, Somvarpet, Kodagu District. |
| | **Ex.P.8** | Letter dtd: 12/08/2015 addressed to complainant. |
| | **Ex.P.9** | Letter dtd: 12/08/2015 addressed to AEE, Quality Assurance Sub-Division, PWD, Mangalore, D.K District. |
| | **Ex.P. 10** | Mahazar with Signature. |
| | **Ex.P. 11, 11(a) & 11(b)** | Annexure-I with Signatures. |

| | | |
|---|---|---|
| | **Ex.P. 12** | Letter dtd: 02/09/2015 addressed by AEE, PWD, Quality Assurance Sub-Division, Mangalore. |
| | **Ex.P. 13** | Photo Album. |
| | **Ex.P. 14** | C.D |
| | **Ex.P. 15** | Photo Album. |
| | **Ex.P. 16** | Letter dtd: 21/12/2015 addressed by AEE, PWD, No.2 Sub-Division, Somvarpet with enclosures. |
| | **Ex.P. 17 & 17(a)** | Investigation Report with Signature. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Ramakrishna S/o Late Annegowda, Retd. EE, Mysore. |
| | **DW-2** | Sri. Doddasiddaiah S/o Late Jogaiah, Retd. Suptd. Engineer, Mysore. |
| | **DW-3** | Sri. T.H Lingaraju S/o Late Hanumappa, Retd. AEE, Mysore. |
| | **DW-4** | Sri. Bhaskar B.G S/o Late Gurappa, AEE, PRE Sub-Division, Somvarpet, Kodagu District. |
| 4 | **Documents marked on behalf of the DGOs through the complainant** | |
| | **Ex.D.1** | Measurement Book. |
| | **Ex.D.2** | Running Accounts Bill with enclosures. |
| | **Ex.D.3** | Record Book. |
| | **Ex.D.4** | Letter dtd: 15/01/2013 addressed to AEE, PWD, No.2 Sub-Division, Somvarpet with enclosures. |

| | | |
|---|---|---|
| | **Ex.D.5** | Agreement. |
| | **Ex.D.6** | CTC. |
| | **Ex.D.7** | Confirmation Letter. |
| | **Ex.D.8** | Copy of KPW-A Code. |
| | **Ex.D.9** | Measurement Book. |
| | **Ex.D.10** | CTC. |
| | **Ex.D.11** | Notification. |
| | **Ex.D.12** | CTC. |
| | **Ex.D.13** | CTC. |
| | **Ex.D.14** | Measurement Book. |
| | **Ex.D.15** | Measurement Book. |
| | **Ex.D.16** | Running Accounts Bill. |
| | **Ex.D.17** | Letter dtd: 07/03/2020 addressed by EE, PWD, Kodagu Division, Madikeri. |
| | **Ex.D.18** | Measurement Book. |
| | **Ex.D.19** | Running Accounts Bill. |
| | **Ex.D.20** | Record Book. |
| | **Ex.D.21** | CTC. |
| | **Ex.D.22** | CTC. |
| | **Ex.D.23** | Official Memorandum. |
| | **Ex.D.24** | CTC. |
| | **Ex.D.25** | Comments dtd: 18/03/2016 submitted by DGO-3 to this institution. |
| | **Ex.D.26** | Daily Rainfall for the year 2012. |

| | | |
|---|---|---|
| | **Ex.D.27** | Letter dtd: 28/11/2013 addressed by AEE, PWD, No.2 Sub-Division, Somvarpet. |
| | **Ex.D.28** | Granular sub-base and bases/IRC:SP:20-2002. |

Dated this the 22nd Febuary, 2021

22/2/21

**(K.BHAGYA)**
Additional Registrar Enquiries-14,
Karnataka Lokayukta,
Bangalore.